(MR. SPEAKER)

DEMAND No. 27.—MISCELLANEOUS SOCIAL AND DEVELOPMENTAL ORGANISATIONS.

39. Miscellaneons Social and Developmental Organisations.

"That a sum not exceeding Rs. 7,24,93,000 be granted to the Government to defray the charges which will come in course of payment during the financial year for the period ending 31st day of March 1971, in respect of 'Miscellaneous, Social and Developmental Organisations'. ".

DEMAND No. 39.—MISCELLANEOUS.

71. Miscellaneous.

"That a sum not exceeding Rs. 11,21,40,000 be granted to the Government to defray the charges which will come in course of payment during the financial year for the period ending 31st day of March 1971, in respect of 'Miscellaneous' ".

Statement by the Chief Minister *re*: Mysore Maharashtra Border Disputes

Sri H. SIDDAVEERAPPA.—Sir, the Leader of the House is here. He has just returned from Delhi. I expect he would make a statement. I would like to know whether he is willing to make a statement now.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಯಾರ ಯಾರ ಹತ್ತಿರ ಮಾತನಾಡಿದರು, ಗಡಿ ವಿಷಯದಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ನಾನೂ ಕೇಳಬೇಕೆಂದಿದ್ದೆ. ಅದನ್ನು ಮಾನ್ಯ ಸಿದ್ಧವೀರಪ್ಪನವರು ಕೇಳಿದ್ದಾರೆ. ನಾನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಸಾಧ್ಯವಾದಮಟ್ಟಿಗೆ ಅವರು ಬರವಣಿಗೆಯಲ್ಲಿ ಕೊಡುವುದಾದರೆ ಕಾಲ ತೆಗೆದುಕೊಳ್ಳಬಹುದು. ಬಾಯಿ ಮಾತಿನಿಂದ ಹೇಳುವುದಾದರೆ ನಾವು ಕುಳಿತು ಕೇಳುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳುತ್ತೇನೆ.

Mr. SPEAKER.—I have no objection if the entire House agrees to sit for some more time and also if the Chief Minister is willing to make a statement.

HON. MEMBERS.—Yes.

Sri P. VENKATAGIRIAPPA.—Sir, what happened to the 6·0' 'clock rule?

Mr. SPEAKER.—If the House is not ready, I have no objection. I have your note requesting me to permit. Now you are raising objection.

ಶ್ರೀ ಎಸ್. ಗೋಪಾಲಗೌಡ.—ಆರು ಗಂಟೆಗೆ ಗಿಲೋಟಿನ್‌ಗೆ ಹಾಕಬೇಕೆಂದು ಮಾನ್ಯ ಸಭೆ ಯಾವಾಗ ಸಲಹೆ ಕೊಟ್ಟಿದೆ ಎಂದು ನನಗೆ ಗೊತ್ತಿಲ್ಲ. ಸಾಧ್ಯವಾದಮಟ್ಟಿಗೆ ಆ ದಿನದ ಅಜೆಂಡಾದಲ್ಲಿರುವ ಕಾರ್ಯಕ್ರಮವನ್ನು ಎಷ್ಟು ಹೊತ್ತಾದರೂ, ಯಾರಿಗೆ ತೊಂದರೆಯಾದರೂ ಮುಗಿಸಿಕೊಂಡು ಹೋಗಬೇಕು ಎಂದು ನಾನು ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ಹೇಳಿದ್ದೇನೆ. ಮಾನ್ಯ ಬಿ. ಎಂ. ಪಾಟೀಲರು ಮಾತನಾಡುತ್ತ ಇದ್ದಾಗ ಆರು ಗಂಟೆ ಆಯಿತು, ಕುಳಿತುಕೊಳ್ಳಿ ಎಂದು ಹೇಳಿ ಗಿಲೋಟಿನ್‌ಗೆ ಹಾಕಿದಿರಿ. ಎಷ್ಟೋ ಜನರು ಮಾತನಾಡುವವರು ಇರುತ್ತಾರೆ, ಅವರ ಬಾಯಿಗೆ ಬೀಗ ಮುದ್ರೆ ಹಾಕುವುದು, ಸರ್ಕಾರದವರು ಯೋಗ್ಯ ಉತ್ತರ ಕೊಡುವಾಗ ಬೇಡ ಎಂದು ಹೇಳಿ ಆರು ಗಂಟೆಗೆ ಗಿಲೋಟಿನ್‌ಗೆ ಹಾಕುವುದು, ಈ ಕಾನೂನು ಯಾರು ಆಚರಣೆಗೆ ತರಬೇಕು ಎಂದು ಒತ್ತಾಯ ಪಡಿಸಿದರು ಅದರ ಬಗ್ಗೆ ನಾನು ಪ್ರತಿಭಟನೆ ಮಾಡುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇಂಥದಕ್ಕೆ ನಾನು ಯಾವ ಹೊತ್ತಿಗೂ ಒಪ್ಪಿಗೆಯನ್ನು ಕೊಟ್ಟಿಲ್ಲ. ನಾನು ಇಲ್ಲದ ಸಮಯದಲ್ಲಿ ಬಿಸಿನೆಸ್ ಅಡ್ವೈಸರಿ ಕಮಿಟಿ ತಮಗೆ ಅಪ್ಪಣೆ ಕೊಟ್ಟಿದ್ದರೆ ಒಳ್ಳೆಯದು, ಇಲ್ಲದೆ ಹೋದರೆ ತಪ್ಪಾಗುತ್ತದೆ. ಆ ಹೊತ್ತಿನ ದಿವಸದ ಬೇಡಿಕೆಗಳನ್ನು ಆ ಹೊತ್ತೇ ಗಿಲೋಟಿನ್‌ಗೆ ಹಾಕುವುದು ಬೇರೆ ಪ್ರಶ್ನೆ. ಈ ಹೊತ್ತು 12 ಗಂಟೆಗೆ ಕುಳಿತಿದ್ದೇವೆ. ಅದಕ್ಕೆ ಯಾರು ಸಲಹೆ ಕೊಟ್ಟಿದ್ದಾರೋ, ಯಾರು ಒಪ್ಪಿದ್ದರೋ ಗೊತ್ತಿಲ್ಲ. ಕಾರ್ಯಕ್ರಮದ ವಿಷಯದಲ್ಲಿ ನಾವು ಒಂದು ತರಹ ನಿರಂಕುಶಾಧಿಕಾರದಂತೆ ವರ್ತನೆ ಮಾಡುವುದಾಗಲೀ, ಯಾರೋ ಒಬ್ಬ ಉನ್ನತ ವ್ಯಕ್ತಿಗಾಗಿ ಕಾರ್ಯಕಲಾಪಗಳನ್ನು ಹೊಂದಿಸಿಕೊಳ್ಳುವುದಾಗಲೀ, ಸಂವಿಧಾನ ಬದ್ಧವಾಗುವುದಿಲ್ಲ, ನಮ್ಮ ನಿಯಮಕ್ಕೆ ಬದ್ಧವಾಗುವುದಿಲ್ಲವೆಂದು ನಾನು ಇಷ್ಟು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

Mr. SPEAKER.—The entire House agreed that some limit should be observed. But now, if the House agreed to hear the Hon. Chief Minister, I shall be ready and permit the Chief Minister to make a statement.

Sri H. N. NANJE GOWDA.—Since you are permitting the Chief Minister to-day to speak about his performance at Delhi, I request you to extend the same courtesy to all the other members also.

Mr. SPEAKER.—This is an extraordinary circumstance. On every occasion I cannot permit the Hon. Members to break that convention. This is a very inportant occasion and that is why the House has agreed and I am permitting the Chief Minister to make a statement.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮಾನ್ಯ ಸದಸ್ಯರು ನಾನು 20ನೇ ತಾರೀಖು ಡೆಲ್ಲಿಗೆ ಹೋಗಿ ಈ ಹೊತ್ತು ತಿರುಗಿ ಬಂದ ಮೇಲೆ ಏನು ಡೆಲ್ಲಿಯಲ್ಲಿ ಮಹಾರಾಷ್ಟ್ರ ಮೈಸೂರು ಗಡಿ ವಿವಾದದ ಬಗ್ಗೆ ಚರ್ಚೆಯಾಯಿತು, ಆ ಚರ್ಚೆಯ ಪರಿಣಾಮವೇನಾಯಿತು ಎಂದು ತಿಳಿದುಕೊಳ್ಳುವುದಕ್ಕೆ ಕುತೂಹಲಿಗಳಾಗಿದ್ದಾರೆಂದು ತಿಳಿದುಕೊಂಡಿದ್ದೇನೆ.

20ನೆಯ ತಾರೀಖು ನಾನು ಡೆಲ್ಲಿಗೆ ಹೋಗಿದ್ದು ಮಾನ್ಯ ಸದಸ್ಯರಿಗೆ ಗೊತ್ತಿದಂತೆ 21 ಮತ್ತು 22ನೇ ತಾರೀಖು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಇತ್ತು. ಅದರಲ್ಲಿ ಭಾಗವಹಿಸುವುದಕ್ಕೆ ನಾನು ಹೋಗಿದ್ದೆ. 20ನೇ ತಾರೀಖು ನಾನು ಇಲ್ಲಿಂದ ಹೋದಾಗ ಡೆಲ್ಲಿ ಮುಟ್ಟುವುದಕ್ಕೆ ಬಹಳ ತಡವಾಗಿದ್ದರಿಂದ ಅವೊತ್ತು ನಾನು ಯಾರಿಗೂ ಭೇಟಿ ಆಗುವುದಕ್ಕೆ ಸಾಧ್ಯವಾಗಲಿಲ್ಲ. 21ನೇ ತಾರೀಖು ಬೆಳಿಗ್ಗೆ, ಸಾಯಂಕಾಲ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಇತ್ತು. ಮತ್ತು ಮಧ್ಯಾಹ್ನ ಕೂಡ ನಡೆಯಿತು. ಕೇಂದ್ರ ಸರ್ಕಾರದ ಅಗ್ರಿಕಲ್‌ಚರಲ್ ಮತ್ತು ಫುಡ್ ಮಿನಿಸ್ಟರ್ ಆದ ಶ್ರೀ ಜಗಜೀವನರಾಂರವರು ನನಗೆ ಬರಬೇಕು ಎಂದು ಹೇಳಿದರು. ಅದರ ಪ್ರಕಾರ ಅವರ ಮನೆಗೆ ನಾನು ಸಾಯಂಕಾಲ ಹೋಗಿದ್ದೆ.

ಶ್ರೀ ಎಸ್. ಗೋಪಾಲಗೌಡ.—ಅವರು ಯಾವ ಕೆಪಾಸಿಟಿಯಲ್ಲಿ ಬರಲಿಕ್ಕೆ ಹೇಳಿದರು ? ಕಾಂಗ್ರೆಸ್ (ಆರ್) ಅದರ ಅಧ್ಯಕ್ಷರಾಗಿ ಹೇಳಿ ಕಳುಹಿಸಿದರೋ ಅಥವಾ ಕ್ಯಾಬಿನೆಟ್ ಮಂತ್ರಿಗಳಾಗಿ ಹೇಳಿ ಕಳುಹಿಸಿದರೋ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಯಾವ ಕೆಪಾಸಿಟಿಯಲ್ಲಿ ಕರೆದಿದ್ದಾರೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಅವರು ಹೇಳಿ ಕಳುಹಿಸಿದಾಗ ನಾನು ಸ್ವಲ್ಪ ಹೊತ್ತು ಅವರ ಜೊತೆಯಲ್ಲಿ ಇದ್ದೆ. ಅವರ ಜೊತೆಯಲ್ಲಿ ಗಡಿ ವಿವಾದದ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಏತಕ್ಕೆಂದರೆ 7-30 ಗಂಟೆಗೆ ಜಗಜೀವನರಾಂರವರನ್ನು ನೋಡಲು ಹೋಗಿದ್ದೆ ಮತ್ತು 8 ಗಂಟೆಗೆ ಪ್ರೈಮ್ ಮಿನಿಸ್ಟರನ್ನು ನೋಡಲು ಅಪಾಯಿಂಟ್‌ಮೆಂಟ್ ಸಿಕ್ಕಿತ್ತು. ಅದಕ್ಕಾಗಿ ಸ್ವಲ್ಪ ಸಮಯದಲ್ಲೇ ಅವರ ಜೊತೆಯಲ್ಲಿ ಚರ್ಚೆ ಮಾಡಿದಾಗ ನಾನು ಅವರ ನೆನಪಿಗೆ ತಂದುಕೊಟ್ಟೆ. ಮುಂಬೈಯಲ್ಲಿ ವರ್ಕಿಂಗ್ ಕಮಿಟಿಯಲ್ಲಿ ಈ ಒಂದು ವಿವಾದವನ್ನು ಕಮೀಷನ್‌ಗೆ ಒಪ್ಪಿಸಬೇಕು ಎನ್ನುವ ಪ್ರಶ್ನೆ ಬಂದಾಗ ಆ ವರ್ಕಿಂಗ್ ಕಮಿಟಿಯಲ್ಲಿ ಏನೇನು ಚರ್ಚೆಯಾಯಿತು ಮತ್ತು ಯಾವ ರೀತಿ ಒಪ್ಪಂದವಾಯಿತು ಎನ್ನುವುದನ್ನು ಅವರ ಗಮನಕ್ಕೆ ತಂದೆ. ಅದರ ಪರಿಣಾಮವಾಗಿ ಕಮೀಷನ್ ನೇಮಕ ಆದಮೇಲೆ ಅದು ಏನು ಮಾಡಬೇಕೆಂಬುದರ ಬಗ್ಗೆ ವರ್ಕಿಂಗ್ ಕಮಿಟಿಯಲ್ಲಿ ಆದ ಚರ್ಚೆಯನ್ನೂ ಮತ್ತು ಇನ್ನೂ ಅನೇಕ ವಿಚಾರಗಳನ್ನೂ ಅವರ ಗಮನಕ್ಕೆ ತಂದೆ. ಅನಂತರ ನಾನು ತಾವು ಹಿರಿಯ ನಾಯಕರಾಗಿದ್ದೀರಿ ಮತ್ತು ಅನೇಕ ವರ್ಷಗಳಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಇದ್ದೀರಿ. ನೀವು ನಮಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಹೇಳಿದೆ. ಮಹಾರಾಷ್ಟ್ರ-ಮೈಸೂರು ಗಡಿ ವಿವಾದದ ಬಗ್ಗೆ ಸಮಾಧಾನಕರವಾದ ಹಾದಿ ಹುಡಕಬೇಕು ಅನ್ನುವುದರಲ್ಲಿ ಅವರು ಆಸಕ್ತಿ ವಹಿಸಿದ್ದಾರೆ ಎಂದು ನಾನು ಭಾವಿಸಿದ್ದೇನೆ. 1956 ರಲ್ಲಿ ಮಹಾರಾಷ್ಟ್ರ ಮೈಸೂರು ಬಾರ್ಡರ್ ವಿಷಯವಾಗಿ ಮುಂಬೈನಲ್ಲಿ ವರ್ಕಿಂಗ್ ಕಮಿಟಿ ಸೇರಿದಾಗ ಕಮೀಷನ್‌ನ್ನು ನೇಮಿಸಬೇಕೆಂದು ತೀರ್ಮಾನಿಸಲಾಯಿತು. ಆದರೆ ಆ ತೀರ್ಪೇ ಅಖೈರು ತೀರ್ಪು ಎಂದು ಎಲ್ಲರ ಅಭಿಪ್ರಾಯ ಇತ್ತು. ಈ ವಿಚಾರವನ್ನು ಅವರ ಗಮನಕ್ಕೆ ತಂದೆ ಮತ್ತು ಇನ್ನೂ ಅನೇಕ ವಿಚಾರಗಳನ್ನು ಅವರ ಗಮಕ್ಕೆ ತಂದೆ ನಾನು ಡೆಲ್ಲಿಗೆ ಹೋದಾಗ ಮಹಾಜನ್ ಕಮೀಷನ್ ಶಿಫಾರಸ್ಸುಗಳು ಮತ್ತು ಮೆರಿಟ್ಸ್ ಬಗ್ಗೆ ಯಾರ ಕೂಡನೂ ಡಿಸ್ಕಷನ್ ಮಾಡಲಿಲ್ಲ. ಅದರ ಅವಶ್ಯಕತೆಯೂ ಕಂಡು ಬರಲಿಲ್ಲ. ಆದರೆ ನಾನು ಕೇಂದ್ರದ ನಾಯಕರ ಜೊತೆಯಲ್ಲಿ ಮಾತನಾಡುವಾಗ ಈ ವಿವಾದದ ಬಗ್ಗೆ ಒತ್ತಿ ಹೇಳಿದ್ದೆ. ಎಷ್ಟು ಪ್ರದೇಶಗಳು ಬರಬೇಕು, ಎಷ್ಟು ಪ್ರದೇಶಗಳು ಹೋಗಬೇಕು ಅನ್ನುವ ಪ್ರಶ್ನೆ ಅಲ್ಲ. ಇದು ಪ್ರಿನ್ಸಿಪಲ್ ಪ್ರಶ್ನೆ. ಈ ಜಂಟಲ್‌ಮೆನ್ ಅಗ್ರಿಮೆಂಟ್ ಪ್ರಶ್ನೆ ಏನು ಇದೆಯೋ ಇದನ್ನು ಆನರ್ ಮಾಡಬೇಕು ಎನ್ನುವ ಪ್ರಶ್ನೆ ಹೇಳಿದೆ. ಮತ್ತು ವರ್ಕಿಂಗ್ ಕಮಿಟಿಯಲ್ಲಿ ಇಬ್ಬರು ಮುಖ್ಯಮಂತ್ರಿಗಳು ಮತ್ತು ಕೇಂದ್ರದ ನಾಯಕರು ಇವರಲ್ಲಿ ಯಾವ ರೀತಿ ಒಪ್ಪಂದವಾಗಿತ್ತು ಮತ್ತು ಯಾವ ರೀತಿ ವಿಚಾರ ವಿನಿಮಯ ನಡೆಯಿತು ಎಂದು ತಿಳಿಸಿದೆ. ಮತ್ತು ಆ ಕಮಿಷನ್ನಿನ ತೀರ್ಮಾನವೇ ಅಖೈರು ತೀರ್ಮಾನ ಎಂದು ಮತ್ತು ಅದರಂತೆ ನಡೆದುಕೊಳ್ಳೋಣ ಎಂದು ಹೇಳಿದುದನ್ನು ಅವರ ಗಮನಕ್ಕೆ ತಂದೆ. ಅವರು ಸಹಾನುಭೂತಿಯಿಂದ ಕೇಳಿದರು. ಮತ್ತು ಅದರ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಮುಂಚಿತವಾಗಿ ನಾನು ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದು ಏನೆಂದರೆ ಒಂದು ಅರ್ಥದಲ್ಲಿ ಅದು ಒಂದು ಅಗ್ರಿಮೆಂಟ್ ಆಗಿತ್ತು. ಆದರೆ ಈ ಒಪ್ಪಂದ ಆದರೂ ಕೂಡ ದುರ್ದೈವದಿಂದ ಶಿಫಾರಸ್ಸು ಬಂದಮೇಲೆ ಅವರಿಗೆ ಸಮಾಧಾನವಾಗಲಿಲ್ಲ. ಈ ಕಮೀಷನ್ನಿನಿಂದ ಅನ್ಯಾಯವಾಗಿದೆ, ಸರಿಯಾದ ನಿರ್ಣಯ ಏನು ಆಗಬೇಕಾಗಿತ್ತೋ ಅದು ಆಗಲಿಲ್ಲ ಎಂದು ಮಹಾರಾಷ್ಟ್ರದ ಜನತೆ ಈ ಒಪ್ಪಂದಗಳನ್ನು ಒಪ್ಪಬೇಕಾಗಿಲ್ಲ ಎಂದು ನಿರಾಕರಿಸಿದರು. ಈ ಜಗಳವನ್ನು ಬಗೆಹರಿಸಬೇಕು ಅನ್ನುವ ವಿಚಾರವಲ್ಲಿ ಅವರು ನನ್ನ ಜೊತೆಯಲ್ಲಿ ಪ್ರಸ್ತಾಪ ಮಾಡಿದರು. ಆದರೆ ನಾನು ಹೇಳಿದೆ, ಈ ಒಂದು ಕಮೀಷನ್ ನೇಮಕವಾಗಿತ್ತು, ಅದರ ಶಿಫಾರಸುಗಳು ಇವೆ, ನೀವು ಕೇಂದ್ರದ ನಾಯಕರಾಗಿರುವಾಗ ನಿಮಗೂ ಜವಾಬ್ದಾರಿ ಇದೆ, ನಮಗೆ ಈ ಕಮೀಷನ್ ಬೇಕಾಗಿರಲಿಲ್ಲ ನಮ್ಮ ಮೇಲೆ ಹೊರಿಸಿದರು. ಆವೊತ್ತು ಮಹಾರಾಷ್ಟ್ರದ ಒತ್ತಾಯಕ್ಕೆ ಈ ಕಮೀಷನ್ ನೇಮಕ ಮಾಡಿದರು. ಆದರೆ ಆ ಕಮೀಷನ್ ಏನು ಶಿಫಾರಸ್ಸು ಮಾಡಿದ್ದಾರೆ ಆ ಶಿಫಾರಸ್ಸಿನ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದು ನಮ್ಮ ಧರ್ಮ ಇದೆ. ಅದರಂತೆ ಈಗ ಹಿಂದೆ ಸರಿಯುತ್ತಿರುವ ಮಹಾರಾಷ್ಟ್ರವನ್ನು ಮಹಾಜನ್ ವರದಿಯನ್ನು ಒಪ್ಪುವಂತೆ ಮಾಡುವುದು ನಿಮ್ಮ ಧರ್ಮ ಎಂದು ನಾನು ಅವರಿಗೆ ಸ್ಪಷ್ಟವಾಗಿ ಹೇಳಿದೆ. ಅನೇಕ ಕಮಿಷನ್‌ಗಳೂ ಆಗಿದ್ದವು ಮತ್ತು ಅಂತಹ ಕಮಿಷನ್‌ಗಳಿಂದ ರಿಪೋರ್ಟುಗಳು ಬಂದಿದ್ದರೂ ಅವನ್ನು ಸರಕಾರ ಒಪ್ಪುವ ಹಾಗಿಲ್ಲ. ಸುಪ್ರೀಂ ಕೋರ್ಟಿನ ಜಡ್ಜ್‌ರ ಕಮಿಷನ್‌ಗಳು ಆಗಿದ್ದವು ಎಂದರೂ ಅದನ್ನು ಒಪ್ಪುವ ಹಾಗಿಲ್ಲ. ಆದರೆ ಮಹಾಜನ್ ಕಮಿಷನ್ ನೇಮಕವಾದ ರೀತಿಯೇ ಬೇರೆ. ಮಹಾಜನ್ ಕಮಿಷನ್ ಮಾಡುವಾಗ ನಮ್ಮಲ್ಲಿ ಒಂದು ಅಂಡರುಸ್ಟ್ಯಾಂಡಿಂಗು ಬಂದು ಇದು ಮೂರು ಪಾರ್ಟಿಗಳ ಒಂದು ಕಮಿಷನ್ ತರದಲ್ಲಿ ಇರಬೇಕೆಂದು ಚರ್ಚೆಗೆ ಬಂದಾಗ ಅಲ್ಲಿದ್ದ ಸದಸ್ಯರುಗಳು ಮೂರು ಪಾರ್ಟಿಗಳ ಕಮಿಷನ್ ಮಾಡುವುದು ಬೇಡ, ಒನ್ ಮ್ಯಾನ್ ಕಮಿಷನ್

ಎಂದು ಮಾಡಿದರೆ ಸಾಕು. ಹಿಂದೆ ಷಾ ಕಮಿಷನ್ ಮಾಡಿದಾಗ ಯಾವ ರೀತಿ ಆಯಿತು ಎನ್ನುವುದು ಗೊತ್ತಿದೆ, ಆದ್ದರಿಂದ ಮಹಾಜನ್ ಕಮಿಷನ್ ಎಂದು ಒಬ್ಬರೇ ಇರುವ ಕಮಿಷನ್ ನೇಮಕ ಮಾಡಬೇಕೆಂದು ಸ್ಪಷ್ಟವಾಗಿ ಆಗ ಹೇಳಿದುದರಿಂದ ಅದರಂತೆ ಕೇಂದ್ರ ಸರಕಾರದ ಒಪ್ಪಿಗೆ ಪಡೆದೇ ಇದು ನೇಮಕವಾಯಿತು ಎನ್ನುವ ಎಲ್ಲ ವಿಚಾರಗಳನ್ನೂ ಇವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಹೆಚ್ಚುಕಾಲ ಅವರೊಡನೆ ಕಳೆಯಲು ಆಗಲಿಲ್ಲ. ಎಂಟು ಗಂಟೆಗೆ ಪ್ರಧಾನ ಮಂತ್ರಿಗಳನ್ನು ನೋಡಬೇಕೆಂದು ಅಲ್ಲಿಗೆ ಹೋಗಬೇಕಾಗಿತ್ತು. ನಾನು ಹೇಳಿದುದನ್ನೆಲ್ಲಾ ಶ್ರೀ ಜಗಜೀವನರಾಂ ಅವರು ಸಮಾಧಾನದಿಂದ ಕೇಳಿದರು. ನನಗೆ ತಿಳಿದಂತೆ ಅವರು ಸಹಾನುಭೂತಿ ವ್ಯಕ್ತ ಮಾಡಿದ್ದಾರೆ. ಅಲ್ಲಿಂದ ನಾನು ಪ್ರೈಂಮಿನಿಸ್ಟರ್‌ರವರ ಹತ್ತಿರ ಹೋಗಬೇಕೆಂದು ಅಲ್ಲಿಗೆ ಹೋದಾಗ ಅವರ ಹತ್ತಿರ ಬಹಳ ಜನ ಇದ್ದರು. ಇದಕ್ಕಾಗಿ ಸ್ವಲ್ಪ ಹೊತ್ತು ಅಲ್ಲೇ ಕಾದೆ. ಆದರೆ ರಾತ್ರಿ ಒಂಬತ್ತು ಗಂಟೆಯ ವೇಳೆಯಲ್ಲಿ ನಾಳೆ ಯಾವುದಾದರೂ ಒಂದು ಕಾಲದಲ್ಲಿ ಸ್ವಲ್ಪ ಅವಕಾಶ ಮಾಡಿಕೊಂಡು ಬರಬೇಕೆಂದು ಸೂಚನೆ ಕಳುಹಿಸಿ ಕೊಟ್ಟರು. ಅದರಂತೆ 21ನೇ ತಾರೀಖು ಪ್ರೈಂ ಮಿನಿಸ್ಟರ್‌ರವರ ಜೊತೆ ಭೇಟಿ ಮಾಡಬೇಕೆಂದು ಕೇಳಿದರು. ಆದರೆ 21ನೇ ತಾರೀಖು ಅವರನ್ನು ಭೇಟಿ ಮಾಡಲು ಆಗಲಿಲ್ಲ. ಮರು ದಿವಸ ಎಂದರೆ 22ನೇ ತಾರೀಖು ಸಂಜೆ ಸುಮಾರು ಆರೂಕಾಲು ಗಂಟೆ ಸಮಯದಲ್ಲಿ ಪ್ರಧಾನ ಮಂತ್ರಿಗಳ ಹತ್ತಿರ ಹೋಗಿದ್ದೆ. ಅವರ ಜೊತೆಯಲ್ಲಿ ಸುಮಾರು ಅರ್ಧ ಗಂಟೆ ವೇಳೆ ಚರ್ಚೆ ಮಾಡಿದೆ ಮತ್ತು ನಮ್ಮ ನಿಲುವೇನು ಎನ್ನುವುದನ್ನು ಅವರಿಗೆ ಸ್ಪಷ್ಟವಾಗಿ ಹೇಳಿದೆ. ಬೊಂಬಾಯಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಆಯೋಗ ನೇಮಿಸಲು ನಿರ್ಧರಿಸಿದಾಗ ನೀವೇ ಪ್ರಧಾನ ಮಂತ್ರಿಗಳೂ ಆಗಿದ್ದಿರಿ ಎಂದು ಹೇಳಿದೆ ಮತ್ತು ನನ್ನ ಜೊತೆಯಲ್ಲಿ ಟೈಂಸ್ ಆಫ್ ಇಂಡಿಯಾದ ಹಾಗೂ ಇನ್ನಿತರ ಪತ್ರಿಕೆಗಳ ಪ್ರೆಸ್ ಕಟಿಂಗ್ಸ್‌ಗಳು ಹಾಗೂ ಫೋಟೋಸ್ಟಾಟ್ ಕಾಪಿಗಳನ್ನೂ ತೆಗೆದುಕೊಂಡು ಹೋಗಿದ್ದೆ. ಇವೆಲ್ಲವನ್ನೂ ನಾನು ಅವರ ಮುಂದೆ ಇಟ್ಟು ಇದರಲ್ಲಿ ಇಬ್ಬರು ಮುಖ್ಯ ಮಂತ್ರಿಗಳ ಒಪ್ಪಂದವಾಗಿತ್ತು. ಮಹಾರಾಷ್ಟ್ರದ ನಾಯಕರು ಆಯೋಗದ ಶಿಫಾರಸು ಅಂತಿಮ ಎಂದು ಹೇಳಿದುದನ್ನು ಮತ್ತು ಅವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನೂ ಅವರಿಗೆ ತೋರಿಸಿದೆ ಈ ಕಡೆ ಇರುವ ಹಳ್ಳಿಗಳನ್ನು ಇವರಿಗೆ ಕೊಡುವುದು ಆ ಕಡೆ ಕೆಲವು ಹಳ್ಳಿಗಳನ್ನು ತೆಗೆದುಕೊಂಡು ಹೋಗುವ ಪ್ರಶ್ನೆಯೇ ಇದರಲ್ಲಿಲ್ಲ. ನಾವು ಈ ವಿಷಯಗಳನ್ನೆಲ್ಲಾ ನೇಗೋಷಿಯೇಟು ಮಾಡಿ ಈ ಪ್ರಿನ್‌ಸಿಪಲ್ಸ್‌ಗಳ ಮೇಲೆ ಹೋಗುವುದಕ್ಕೆ ಸಾಧ್ಯವಿಲ್ಲ ಎಂದು ತೀರ್ಮಾನಕ್ಕೆ ಬಂದಮೇಲೆ ಆಗ ಈ ಕಮಿಷನ್ ಶಿಫಾರಸುಗಳನ್ನು ಒಪ್ಪಬೇಕು ಎಂದು ಆಗಿತ್ತು. ಇದಕ್ಕಾಗಿ ಮುಂದೆ ಯಾವ ತರಹದ ನೆಗೋಷಿಯೇಷನ್ಸ್‌ಗಳನ್ನು ಮಾಡಬೇಕು ಮತ್ತು ಈಗ ಬಂದಿರುವ ರೆಕಮೆಂಡೇಷನ್‌ಗಳನ್ನು ನೋಡಿಕೊಂಡು ಒಂದು ಹೊಸ ಹಾದಿ ಹುಡುಕಿ ಒಂದು ಸೂತ್ರವನ್ನು ಮಾಡಬೇಕೆಂದು ಹೇಳಿದಾಗ ನಾನು ಅವರಿಗೆ ಯಾರ್ಯಾರು ಏನೇನು ಸ್ಟೇಟುಮೆಂಟುಗಳನ್ನು ಹೇಳಿದ್ದಾರೆ ಮತ್ತು ಅವರೇ ಸ್ವತಃ ಒಪ್ಪಿ ಏನು ಹೇಳಿದ್ದರು ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್‌ರವರೂ ಕೂಡ ಚೀಫ್ ಮಿನಿಸ್ಟರಾಗಿ ಏನು ಸ್ಟೇಟುಮೆಂಟು ಕೊಟ್ಟಿದ್ದರು, ಬಾಬಾ ಸಾಹೇಬ್, ದೇಸಾಯಿರವರು, ನಂದಾರವರು ಹಾಗೂ ಇನ್ನಿತರರು ಏನೇನು ಸ್ಟೇಟುಮೆಂಟುಗಳನ್ನು ಕೊಟ್ಟಿದ್ದರು ಅವನ್ನೆಲ್ಲಾ ವಿವರವಾಗಿ ಅವರಿಗೆ ಹೇಳಿದಾಗ ಅದನ್ನೆಲ್ಲಾ ಅವರು ಕೇಳಿದರು ಮತ್ತು ನಾನು ಕೆಲವು ಹೇಳಿಕೆಗಳನ್ನು ಅವರಿಗೆ ಓದಿ ತೋರಿಸಿದೆ. ಇವೊತ್ತಿನ ದಿವಸ ಅವರನ್ನು ಹೆಚ್ಚಾಗಿ ಏನೂ ಕೇಳುತ್ತಿಲ್ಲ. ನ್ಯಾಯವನ್ನು ಕೇಳುತ್ತಿದ್ದೇನೆ ಇದರಲ್ಲಿ ಪೆರೋಚಿಯಲ್ ಆಗಿ, ಪೌಂಡ್ ಆಫ್ ಫ್ಲಷ್ ಎನ್ನುವ ರೀತಿಯಲ್ಲಿ, ನಾವೇನೂ ಸಂಕುಚಿತ ಪ್ರಾಂತೀಯ ಭಾವನೆಯುಳ್ಳವರಲ್ಲ. ನಮಗೇನು ಹಟ ಇಲ್ಲ. ನಾವೆಲ್ಲರೂ ಒಂದು. ನಾವು ಯಾವ ಪ್ರದೇಶಗಳಲ್ಲೇ ಎಲ್ಲಿಯೇ ಇರಲಿ ನಾವು ಭಾರತದಲ್ಲೇ ಇರುವವರು ಮತ್ತು ಒಂದೇ ದೇಶಕ್ಕೆ ಸೇರಿದವರು. ಈ ಗಡಿ ಪ್ರಶ್ನೆಯನ್ನು ಅಂತಿಮವಾಗಿ ಇತ್ಯರ್ಥ ಮಾಡಲು ತಾವೇ ಮಾಡಿದಂತಹ ಕಮಿಷನ್‌ಗಳ ರೆಕಮೆಂಡೇಷನ್‌ಗಳನ್ನು ಅವು ಈಚೆಗೆ ಬಂದ ಮೇಲೆ ಅವನ್ನು ಒಪ್ಪುವುದಿಲ್ಲ ಎಂದು ಹೇಳುವುದು ಸಾಧುವಲ್ಲ. ಆದ ದರಿಂದ ಆಯೋಗದ ವರದಿಯನ್ನು ಮತ್ತು ಅದರ ರೆಕಮೆಂಡೇಷನ್‌ಗಳನ್ನು ಪೂರ್ತಿಯಾಗಿ ಮಹಾರಾಷ್ಟ್ರದವರೂ ಒಪ್ಪಬೇಕೆಂದು ತಾವೇ ಒತ್ತಾಯ ಮಾಡಬೇಕೆಂದು ಕಳಕಳಿಯಿಂದ ಪ್ರಧಾನ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡೆ. ಹಿಂದೆ ನಮ್ಮ ಚೀಫ್ ಮಿನಿಸ್ಟರ್ ಆಗಿದ್ದ ಶ್ರೀಮಾನ್ ನಿಜಲಿಂಗಪ್ಪನವರೂ ವರ್ಕಿಂಗು ಕಮಿಟಿಯಲ್ಲಿದ್ದರು ಮತ್ತು ಆಗ ಮೂರು ಜನರು ಇರುವ ಕಮಿಷನ್ ಮಾಡಬೇಕೆಂದು ಅಲ್ಲಿ ಚರ್ಚೆ ಬಂದಾಗ ಅವರು ಒಬ್ಬರೇ ಇರುವ ಕಮಿಷನ್ ಇರಬೇಕೇ ವಿನಾ ಮೂರು ಜನರು ಇರುವುದು ಬೇಡ ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಹಿಂದೆ ವರ್ಕಿಂಗು ಕಮಿಟಿಯವರು ಮೂರು ಜನರ ಒಂದು ಕಮಿಟಿ ಮಾಡಿದಾಗ ಪಂಜಾಬಿನಲ್ಲಿ ಚಂಡೀಗರದ ವಿಷಯ ಯಾವ ರೀತಿ ಆಯಿತು ಅದರಿಂದ ಮೂರು ಜನರು ಇರುವ ಕಮಿಷನ್ ಬೇಡ, ಒಬ್ಬರೇ ಇರುವ ಕಮಿಷನ್

(ಶ್ರೀ ವೀರೇಂದ್ರ ಪಾಟೀಲ್)

ಬೇಕಾದರೆ ಮಾಡಬಹುದು. ಇಲ್ಲದಿದ್ದರೆ ಇದರಲ್ಲಿ ಮೆಜಾರಿಟಿ ಹಾಗೂ ಮೈನಾರಿಟಿ ಪ್ರಸಂಗ ಬರುತ್ತದೆ ಮತ್ತು ಅಮಲು ಬಜಾವಣಿ ಮಾಡಲೂ ಕಷ್ಟವಾಗುತ್ತದೆ ಎಂದೂ ಆಗ ಹೇಳಿದರು. ಆಗ ಕಮಿಟಿಯಲ್ಲಿದ್ದವರೆಲ್ಲರೂ ಒನ್ ಮ್ಯಾನ್ ಕಮಿಷನ್ ಎಂದು ಮಾಡಿದರೆ ಇದರಲ್ಲಿ ಯಾವ ತರಹದ ಡಿಸ್ಸೆಂಟು ಪ್ರಶ್ನೆಯೇ ಬರುವುದಿಲ್ಲ ಮತ್ತು ಆಗ ಎಲ್ಲರೂ ಒಬ್ಬರೇ ಇರುವ ಆಯೋಗ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳಿದರು ಮತ್ತು ಆಯೋಗದ ತೀರ್ಪೇ ಅಂತಿಮವಾಗಿರಬೇಕು ಎಂದು ಒಪ್ಪಿದ್ದ ಮಾತನ್ನು ಅವರಿಗೆ ಹೇಳಿದೆ ಮತ್ತು ಇವುಗಳು ಪೇಪರುಗಳಲ್ಲಿ ಬಂದಿರುವ ವಿಚಾರಗಳನ್ನು ಸ್ಪಷ್ಟವಾಗಿ ಹೇಳಿದೆ. ಮಹಾರಾಷ್ಟ್ರದ ನಾಯಕರು ವಿಲೇಜ್ ಆಸ್ ಎ ಯೂನಿಟ್, ಲಿಂಗ್ವಿಸ್ಟಿಕ್ ಕಂಟಿಗ್ಯುಯಿಟಿ, ಹಾಗೂ ರಿಲೇಟೀವ್ ಮೆಜಾರಿಟಿ ಇತ್ಯಾದಿ ವಿಷಯಗಳ ಬಗ್ಗೆ ಏನು ಕೆಲವು ಪ್ರಿನ್‌ಸಿಪಲ್‌ಗಳನ್ನು ಹೇಳುತ್ತಿದ್ದಾರೆ, ಅದರ ಬಗ್ಗೆ 1957 ರಲ್ಲಿ ಏನು ಮೆಮೊರ್ಯಾಂಡಂ ಅವರು ಕೊಟ್ಟಿದ್ದಾರೋ ಅವುಗಳನ್ನು ಅವರಿಗೆ ತೋರಿಸಿದೆ. ಇವು ಪೇಪರುಗಳಲ್ಲಿ ಆಗಲೇ ಪ್ರಕಟವಾಗಿದ್ದವು. ಇದರಲ್ಲಿ ಸಿಂಪಲ್ ಮೆಜಾರಿಟಿ ಎಂದು ಇದ್ದುದನ್ನು ಮುಂದೆ ಅಮೆಂಡುಮೆಂಟ್ ಮಾಡಿ ಬೆಳಗಾಂನಲ್ಲಿ ಶೇಕಡಾ 55 ಕ್ಕಿಂತ ಮರಾಠೀಯವರು ಕಡಿಮೆ ಬರುತ್ತಾರೆಂದು ತಿಳಿದು ಅವರು ಹೇಳಿದ ತತ್ವಕ್ಕೇ ಅನುಸರಿಸಿ ರೆಸಲ್ಯೂಷನ್ ಮಾಡಿದ್ದರೂ ಅಂತಹ ತತ್ವಗಳಿಗೇ ತಿಲಾಂಜಲಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ವರ್ಕಿಂಗು ಕಮಿಟಿಯಲ್ಲಿ ರೆಸಲ್ಯೂಷನ್ ಕೂಡ ಆಗಿದೆ ಮತ್ತು ಆಗ ಏನು ರೆಸಲ್ಯೂಷನ್ ಆಗಿದೆ ಅವರಲ್ಲಿ ಇರುವ ಮೊದಲನೇ ವಾಕ್ಯವೇ

> "keeping in view the fundamental basis of the States Reorganisation Commission"

ಎಂದು ಇದೆ. ಈ ರೆಸಲ್ಯೂಷನ್ ಪ್ರಕಾರ ಎಸ್ ಆರ್ ಸಿ ಪ್ರಿನ್‌ಸಿಪಲ್ಸ್‌ಗಳನ್ನು ಒಪ್ಪಿಕೊಂಡಿರುವಾಗ ಈಗ ಹೊಸದಾಗಿ ಪ್ರಿನ್‌ಸಿಪಲ್ಸ್‌ಗಳನ್ನು ತಂದರೆ ಅದಕ್ಕೇನಾದರೂ ಹಾದಿ ಇದೆಯೇ ಎಂದು ಕೇಳಿದೆ ಮತ್ತು ಮಹಾರಾಷ್ಟ್ರದವರೇ ಕಮಿಷನ್ ಮಾಡಬೇಕೆಂದು ಹೇಳಿ ಮಾಡಿಸಿರುವಾಗ ಇದಕ್ಕೆ ಅವರಿಗೆ ಪುನಃ ಆಸ್ಪದ ಕೊಡಬಾರದು ಮತ್ತು ಮಹಾಜನ್ ಶಿಫಾರಸುಗಳು ಏನಿವೆ ಅವನ್ನು ಒಪ್ಪಬೇಕು. ಅವರು ಕಮಿಷನ್ ಮಾಡುವಾಗಲೇ ಬೇಡ ಎಂದು ಹೇಳಿದ್ದರೆ ಇದರ ವಿಷಯ ಎಂದೋ ತೀರ್ಮಾನವಾಗುತ್ತಿತ್ತು. ವರ್ಕಿಂಗು ಕಮಿಟಿಯವರು ಅಂದು ನಿರ್ಣಯ ಮಾಡುವಾಗ ಇವನ್ನೆಲ್ಲಾ ಚರ್ಚೆ ಮಾಡಲಾಗಿದೆ ಮತ್ತು ಇದರ ತೀರ್ಮಾನಗಳನ್ನು ಒಪ್ಪಲೇಬೇಕು. ಇದರಲ್ಲಿ ಫ್ರೀ ಹ್ಯಾಂಡು ಇಂಬೇಕೆಂದು ಅವಕಾಶವಿರಬಾರದು, ಮಹಾರಾಷ್ಟ್ರದವರು ಈಗ ಹೇಳುತ್ತಿರುವ ಗ್ರಾಮ ಘಟಕದ ಸೂತ್ರಗಳು ಸರಿಯಲ್ಲ ಮತ್ತು ರೆಸಲ್ಯೂಷನ್ ಪ್ರಕಾರ ಎಸ್.ಆರ್.ಸಿ. ಪ್ರಿನ್‌ಸಿಪಲ್ಸ್‌ಗಳನ್ನು ಒಪ್ಪಲೇಬೇಕು. ಇದರ ಟರ್ಮ್ಸ್ ಆಫ್ ರೆಫರೆನ್ಸ್ ಕೂಡ ಯಾವಾಗ ಕಮಿಷನ್ ನೇಮಕ ಮಾಡಬೇಕೆಂದು ಆಯಿತೋ ಆಗಲೇ ಕಮಿಷನ್‌ನವರಿಗೆ ಪೂರ್ಣ ಅಧಿಕಾರ ಕೊಡಬೇಕು ಎಂದು ಹೇಳಿ ಒಳ್ಳೆಯ ನ್ಯಾಯ ತಿಳಿದಂತಹವರು ಎಂದು ಶ್ರೀ ಮಹಾಜನ್‌ರವರ ಅಧ್ಯಕ್ಷತೆಯಲ್ಲಿ ಇಂತಹ ಒಂದು ಕಮಿಷನ್ ಮಾಡಬೇಕೆಂದು ಇವರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರೂ ಆಗಿದ್ದವರು ಮತ್ತು ಒಳ್ಳೆಯ ದೊಡ್ಡ ಮನುಷ್ಯರು ಎಂದು ಇವರ ಅಧ್ಯಕ್ಷತೆಯಲ್ಲಿ ಕಮಿಷನ್ ನೇಮಕ ಮಾಡಲಾಯಿತು. ಇವರು ಇಂತಹ ಎಷ್ಟೋ ಕೇಸುಗಳನ್ನು ಬಹಳ ಚೆನ್ನಾಗಿ ವ್ಯವಹರಿಸಿ ತೀರ್ಮಾನ ಮಾಡಿದ್ದಾರೆ ಮತ್ತು ಉನ್ನತ ಮಟ್ಟದಲ್ಲಿ ಚರ್ಚೆ ಮಾಡಿ ಇವರು ಕೊಟ್ಟ ತೀರ್ಮಾನಗಳನ್ನು ನಾವೆಲ್ಲರೂ ಒಪ್ಪಬೇಕು ಮತ್ತು ಇವನ್ನು ಜಾರಿಗೆ ತರಲು ಪ್ರಯತ್ನಮಾಡಬೇಕು ಎಂದು ನಾನೂ ಕಳಕಳಿಯಿಂದ ಅವರಲ್ಲಿ ವಿನಂತಿ ಮಾಡಿಕೊಂಡೆ. ಅವರು ಹೇಳುವ ಕೆಲವು ಪ್ರಿನ್ಸಿಪಲ್ಲುಗಳಿಗೆ ಸಮ್ಮತಿಸಬೇಕೆಂದು ವಿರೋಧ ಪಕ್ಷದ ನಾಯಕರು ಬಹಳ ಜನ ಒತ್ತಾಯ ಮಾಡುತ್ತಿದ್ದಾರೆ ಇದಕ್ಕಾಗಿ ಏನು ಮಾಡಬೇಕು ಎಂದು ಇಲ್ಲಿ ಒಂದು ವಿಚಾರ ಹೇಳಿದರು. ನಾನು ಅವರಿಗೆ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ನಮ್ಮ ವಿರೋಧ ಪಕ್ಷದ ನಾಯಕರಾಗಿರುವವರೆಲ್ಲರೂ ಬಹುತೇಕ ಎಸ್.ಎಸ್.ಪಿ. ಲೀಡರು ಆಗಿರುವವರು ಮಹಾರಾಷ್ಟ್ರದವರು, ಪಿ.ಎಸ್.ಪಿ. ಲೀಡರ್ ಆಗಿರುವವರು ಮಹಾರಾಷ್ಟ್ರದವರು, ಕಮ್ಯೂನಿಸ್ಟ್ ಪಕ್ಷದ ಲೀಡರು ಆಗಿರುವವರೂ ಮಹಾರಾಷ್ಟ್ರದವರು, ಹೀಗೆ ದೇಶದ ಮಹತ್ವದ ಪಾರ್ಟಿಗಳ ಲೀಡರಾಗಿರುವವರೆಲ್ಲರೂ ಮಹಾರಾಷ್ಟ್ರದವರೇ ಆಗಿರುವುದರಿಂದ ಇಂತಹ ಒಂದು ಪರಿಸ್ಥಿತಿಯಾಗಿದೆ ಎಂದು ಹೇಳಿದೆ. ಶ್ರೀ ನಾಥಪೈರವರೂ ಮಹಾರಾಷ್ಟ್ರದವರೇ.

ಶ್ರೀ ಎಸ್. ಗೋಪಾಲಗೌಡ.—ಲೋಕಸಭೆಯ ಎಸ್.ಎಸ್.ಪಿ. ನಾಯಕರು ಒರಿಸ್ಸಾದವರು, ಎಸ್.ಎಸ್.ಪಿ. ಅಧ್ಯಕ್ಷರು ಬಿಹಾರದವರು.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲ ವಿರೋಧ ಪಕ್ಷಗಳ ನಾಯಕರೂ ಆ ರೀತಿ ಹೇಳಿಲ್ಲ ಎಂದು ನಾನು ಹೇಳಿದುದಕ್ಕೆ ಪ್ರಧಾನ ಮಂತ್ರಿಗಳು ನಕ್ಕು ಅದನ್ನು ಒಪ್ಪಿಕೊಂಡರು. ಮಹಾರಾಷ್ಟ್ರದವರೇ ಎಲ್ಲ ಲೀಡರುಗಳು ಆಗಿದ್ದಾರೆ ಎಂದು ಇದರ ಬಗ್ಗೆ ಪ್ರಶ್ನೆ ಮಾಡಲಿಲ್ಲ. ಅನೇಕರೂ ಇತರರೂ ಇದರ ಬಗ್ಗೆ ಯಾವ ರೀತಿ ಅಭಿಪ್ರಾಯಪಟ್ಟರು ಎನ್ನುವ ದೃಷ್ಟಿಯಿಂದ ಇಲ್ಲಿ ಹೇಳುತ್ತಿಲ್ಲ. ಶ್ರೀಮಾನ್ ನಾಗಪ್ಪನವರು ನನಗೆ ಇಲ್ಲಿಂದ ಹೋಗುವುದಕ್ಕೆ ಮುಂಚೆ ಲೋಕ ಸಭೆಯ ಎಸ್.ಎಸ್.ಪಿ. ನಾಯಕರಾದ ಶ್ರೀಮಾನ್ ರಬೀ ರಾಯರವರು ಅವರಿಗೆ ಬರೆದ ಕಾಗದವನ್ನು ಕೊಟ್ಟಿದ್ದರು. ಅವನ್ನು ನಾನು ನೋಡಿದ್ದೇನೆ. ಇದರ ಬಗ್ಗೆ ಇನ್ನೂ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ ಎಂದು ಹೇಳಿ ಆ ಕಾಗದದಲ್ಲಿ ಬರೆದುದನ್ನು ತೋರಿಸಿದರು. ನಾನು ಪ್ರತ್ಯಕ್ಷವಾಗಿ ಆ ಒಂದು ಪತ್ರವನ್ನು ನೋಡಿದ್ದೇನೆ. ಅನೇಕ ನಾಯಕರುಗಳು ಅದರಲ್ಲಿ ಸೈನ್ ಮಾಡಿದ್ದಾರೆ. ಆದರೆ ಅವರು ವೈಯಕ್ತಿಕವಾಗಿ ಅದರಲ್ಲಿ ಸೈನ್ ಮಾಡಿದ್ದಾರೆ. ಏಕೆಂದರೆ ಪಕ್ಷದ ಆದೇಶ ಅವರಿಗೆ ಬಂದಿಲ್ಲ. ಆಯಾ ಪಾರ್ಲಿಮೆಂಟರಿ ಪಕ್ಷಗಳು ಈ ಗಡಿ ವಿವಾದದ ಬಗ್ಗೆ ಯಾವ ತೀರ್ಮಾನವನ್ನು ಕೈಗೊಂಡಿಲ್ಲವೆಂದು ಗೊತ್ತಾಗಿದೆ. ಆದ್ದರಿಂದ ಅವರು ಆ ಪತ್ರದಲ್ಲಿ ವೈಯಕ್ತಿಕವಾಗಿ ಸೈನ್ ಮಾಡಿದ್ದಾರೆಯೇ ಹೊರತು ಪಕ್ಷದ ಆದೇಶವೇನೂ ಈ ಬಗ್ಗೆ ಬಂದಿಲ್ಲ ಎಂದು ಗೊತ್ತಾಗಿದೆ. ಈ ವಿಚಾರವನ್ನು ಪ್ರಧಾನಿಯವರಿಗೆ ತಿಳಿಸಿದೆ.

6–30 P.M.

ನಮ್ಮಲ್ಲಿ ಮಾನ್ಯ ಸಭೆಯ ಸದಸ್ಯರು ಏನು ದೆಹಲಿಗೆ ಡಿಲಿಗೇಷನ್ ಹೋಗಿದ್ದರು ಅದರಿಂದ ನಮಗೆ ಲಾಭ ಆಗಿದೆ. ಶ್ರೀಮಾನ್ ನಾಗಪ್ಪನವರು ನಿಯೋಗದಲ್ಲಿ ದೆಹಲಿಗೆ ಹೋಗಿದ್ದರಿಂದ ಎಸ್.ಎಸ್.ಪಿ. ಮುಖಂಡರಾದ ಶ್ರೀ ರಬಿರಾಯರಿಂದ ಒಂದು ಪತ್ರವನ್ನು ತರುವುದಕ್ಕೆ ಸಾಧ್ಯವಾಯಿತು. ಆ ಪತ್ರದಿಂದ ನಮ್ಮಗೆ ಎಷ್ಟೋ ಅನುಕೂಲವಾಗಿದೆ. ಬೇರೆಯವರು ಹೋಗಿದರೆ ಅದನ್ನು ತರುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಶ್ರೀ ಮಾನ್ ನಾಗಪ್ಪನವರು ಅಲ್ಲಿಗೆ ಹೋಗಿದ್ದರಿಂದ ಆ ಪತ್ರವನ್ನು ತರುವುದಕ್ಕೆ ಸಾಧ್ಯವಾಯಿತು. ಶ್ರೀಮಾನ್ ಶಿವಪ್ಪನವರು ಮತ್ತು ಬೇರೆ ಮಾನ್ಯ ಸದಸ್ಯರುಗಳ ನಿಯೋಗ ಏನು ದೆಹಲಿಗೆ ಹೋಗಿತ್ತು ಅವರೂ ಸಹ ಈ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಅದರಿಂದಲೂ ನಮಗೆ ಲಾಭ ಆಗಿದೆ. ಪಾರ್ಲಿಮೆಂಟಿನ ಅನೇಕ ವಿರೋಧ ಪಕ್ಷಗಳ ನಾಯಕರು ಮತ್ತು ಕೆಲವು ಎಂ.ಪಿ. ಗಳು ಯಾವ ಮೆಮೋರಾಂಡಮ್ಮಿಗೆ ಸಿಗ್ನೇಚರ್ ಮಾಡಿದ್ದರೋ ಆ ಪಾರ್ಲಿಮೆಂಟ್ ಸದಸ್ಯರು ಏನು ಹೇಳಿದರು ಎಂದರೆ ಮುಂದೆ ಏನಾದರೂ ಇಂಥಾ ಗಡಿ ವಿವಾದಗಳು ಉದ್ಭವವಾದರೆ ಅವರ ಇತ್ಯರ್ಥಕ್ಕೆ ಈ ಸೂತ್ರವನ್ನು ಅನ್ವಯಿಸಬೇಕೆಂಬ ತಿಳುವಳಿಕೆಯ ಮೇಲೆ ಕೆಲವು ಎಂ.ಪಿ.ಗಳು ಕೆಲವು ಮಹಾರಾಷ್ಟ್ರದ ವಿರೋಧ ಪಕ್ಷದ ಸದಸ್ಯರು ಸಲ್ಲಿಸಿದ ಮೆಮೋರಾಂಡಂಗೆ ಸಿಗ್ನೇಚರ್ ಹಾಕಿದ್ದಾರೆ. ಎಂದು ಗೊತ್ತಾಯಿತು. ಈ ವಿಚಾರವನ್ನು ನಾನು ಪ್ರಧಾನಿಯವರಿಗೆ ತಿಳಿಸಿದ್ದೇನೆ. ಆದರೆ ನಮ್ಮ ಪ್ರಶ್ನೆ ಬೇರೆ, ಗಡಿ ವಿವಾದವಲ್ಲಿ ಜಗಳ ಆಗಿ ಕಮಿಷನ್ ನೇಮಕ ಮಾಡಿ ಅವರಿಂದ ಸಿಫಾರಸ್ಸು ಬಂದಮೇಲೆ ಈಗ ಈ ಪ್ರಶ್ನೆ ಉದ್ಭವವಾಗಿದೆ ಎಂದು ನಾನು ಸಂಧಿಸಿದ ಎಂ.ಪಿ. ಗಳಿಗೆ ಹೇಳಿದೆ. ಅದೂ ಅಲ್ಲದೆ ಅವರು ಆ ಮೆಮೊರಾಂಡಂಮ್ಮಿಗೆ ಸಿಗ್ನೇಚರ್ ಹಾಕಬೇಕಾದರೆ ಇದನ್ನು ಸ್ವಲ್ಪ ಕ್ಲಾರಿಫೈ ಮಾಡಿ ಎಂದು ಸ್ವಲ್ಪ ಹಿಂದೆ ಮುಂದೆ ನೋಡಿದ್ದಾರೆಂದು ಆ ಮಾನ್ಯ ಸದಸ್ಯರು ಹೇಳಿದರು. ಮಹಾರಾಷ್ಟ್ರದವರು ಅನೇಕ ಎಂ. ಪಿ. ಗಳ ಹತ್ತಿರ ಮೆಮೋರಾಂಡಂಮ್ಮಿಗೆ ಸಿಗ್ನೇಚರ್ ತೆಗೆದುಕೊಂಡಿದ್ದಾರೆ. ನಾನು ನಿನ್ನೆ ಸಾಯಂಕಾಲ ಆಕಸ್ಮಿಕವಾಗಿ ಒಂದು ಕಡೆ ಹೋಗಿದ್ದೆ. ಒಬ್ಬರು ಎಂ. ಪಿ. ಗಳು ಮೆಮೋರಾಂಡಮ್ಮಿಗೆ ಸಿಗ್ನೇಚರ್ ಹಾಕಿದಂತಹವರು ನನ್ನನ್ನು ಕುರಿತು ಮುಖ್ಯಮಂತ್ರಿಗಳಿಗೆ ನಮಸ್ಕಾರ ಎಂದು ಹೇಳಿದರು. ಅನಂತರ ನಿಮ್ಮ ಗಡಿ ಸಮಾಚಾರ ನನಗೆ ಗೊತ್ತು ಎಂದು ಹೇಳಿದರು. ಆಮೇಲೆ ನಾನು ಅವರಿಗೆ ಹೇಳಿದೆ, ಈ ಗಡಿ ಜಗಳವನ್ನು ಏನಾದರೂ ಮಾಡಿ ಬಗೆಹರಿಸಬೇಕು, ಈ ಜಗಳ 1957ನೇ ಇಸವಿಯಿಂದ ಪ್ರಾರಂಭವಾಯಿತು. ಮಹಾಜನ್ ಕಮಿಷನ್ ನೇಮಕವಾಗುವಾಗ ಈ ಆಯೋಗದ ಸಿಫಾರಸ್ಸು ಅಂತಿಮವಾದದ್ದು, ಇದನ್ನು ಎಲ್ಲರೂ ಒಪ್ಪಬೇಕೆಂದು ಮಹಾರಾಷ್ಟ್ರ ಮತ್ತು ಮೈಸೂರಿನ ಮುಖ್ಯಮಂತ್ರಿಗಳ ಮಧ್ಯೆ ಒಪ್ಪಂದವಾಗಿತ್ತು. ಈ ಆಯೋಗದ ತೀರ್ಮಾನಕ್ಕೆ ಒಪ್ಪುತ್ತೇವೆಂದು ಅವರು ಹೇಳಿದ್ದರು ಎಂದು ಈ ಪ್ರಶ್ನೆಯ ಹಿನ್ನಲೆಯನ್ನು ಆ ಎಂ. ಪಿ. ಗಳಿಗೆ ನಾನು ಸ್ಪಷ್ಟ ಮಾಡಿದ್ದೇನೆ. ಇವೊತ್ತು ಮಹಾರಾಷ್ಟ್ರ ಮತ್ತು ಮೈಸೂರು ನಾಯಕರಾಗಲೀ, ಎಂ. ಪಿ. ಗಳಾಗಲೀ ಈ ಗಡಿ ಸಮಸ್ಯೆಯ ಬಗ್ಗೆ ಎಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದಾರೆಯೋ ಅಷ್ಟು ವಿಚಾರಗಳನ್ನು ಉಳಿದ ಇತರ ರಾಜ್ಯಗಳ ಎಂ ಪಿ.ಗಳು ಈ ವಿಚಾರವನ್ನು ತಿಳಿದುಕೊಂಡಿದ್ದಾರೆ ಎಂದು ನನಗೆ ಅನಿಸುವುದಿಲ್ಲ. ಅವರಿಗೆ ಇದರ ತಿಳುವಳಿಕೆಯನ್ನು ಕೊಡ

(ಶ್ರೀ ವೀರೇಂದ್ರ ಪಾಟೀಲ್)

ಬೇಕಾದದ್ದು ಅವಶ್ಯಕವಿದೆ. ಈ ಹಿಂದೆ ಈ ಮಹಾಜನ್ ಕಮಿಷನ್ ನೇಮಕವಾಗುವಾಗ ಎರಡು ರಾಜ್ಯಗಳಿಗೂ ಅಗ್ರಿಮೆಂಟ್ ಆಗಿದ್ದೂ, ಮಹಾಜನ್ ಕಮಿಷನ್ನಿನ ತೀರ್ಮಾನದಂತೆ ಇಬ್ಬರೂ ನಡೆದುಕೊಳ್ಳುತ್ತೇವೆಂದು ಅಗ್ರಿಮೆಂಟ್ ಆಗಿದ್ದೂ, ಅನೇಕ ಎಂ. ಪಿ. ಗಳಿಗೆ ತಿಳಿಯುವಂತೆ ಮಾಡಬೇಕಾದ್ದು ಅವಶ್ಯಕ ಇದೆ. ಲೋಕ ಸಭೆಯ ಎಸ್. ಎಸ್. ಪಿ. ನಾಯಕರಾದ ಶ್ರೀ ರಬಿರಾಯ್ ಅವರು ಈ ಗಡಿ ವಿವಾದದ ಬಗ್ಗೆ ಶ್ರೀಮಾನ್ ನಾಗಪ್ಪನವರಿಗೆ ಏನು ಪತ್ರವನ್ನು ಬರೆದಿದ್ದಾರೆ ಅದನ್ನು ನಾನು ಇಲ್ಲಿ ಓದುತ್ತೇನೆ. ಅದು ಈ ರೀತಿ ಇದೆ:

> "Please refer to your letter of even date. Our Parliamentary Party has taken no stand on Maharashtra-Mysore border issue. The letter written by Sri S. M. Joshi along with others to the Prime Minister only represents their individual views and not the views of the Party."

ಎಂದು ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಚಾರವನ್ನು ನಾನು ಪ್ರಧಾನಿಯವರಿಗೆ ತಿಳಿಸಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ಡಾ. ರಾಮಸುಭಾಗ್‌ಸಿಂಗ್ ಅವರು ತಮ್ಮ ಪಕ್ಷದ ಪರವಾಗಿ ಏನಾದರೂ ಈ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರ ಜೊತೆಯಲ್ಲಿ ನಾನು ಚರ್ಚೆ ಮಾಡಿದ್ದೇನೆ. ಗ್ರಾಮ ಘಟಕ ಸೂತ್ರವನ್ನು ಶ್ರೀ ರಾಮಸುಭಾಗ್‌ಸಿಂಗ್ ಅವರು ಒಪ್ಪಿಕೊಂಡಿದ್ದಾರೆ ಎಂದು ಒಂದು ಪ್ರಚಾರ ನಡೆಯುತ್ತಿದೆ ಆ ಬಗ್ಗೆ ಸ್ಪಷ್ಟ ಮಾಡಬೇಕಾದ್ದು ಅವಶ್ಯಕ ಇದೆ. ಅದರ ಸಲುವಾಗಿ ಆ ಬಗ್ಗೆ ಸತ್ಯಾಂಶ ಏನಿದೆ ಎಂಬುದನ್ನು ನಾನು ತಿಳಿದುಕೊಳ್ಳಲು ಬಂದಿದ್ದೇನೆ ಎಂದು ನಾನು ಅವರನ್ನು ಕೇಳಿದಾಗ ಅವರು ಹೇಳಿದರು, ಶ್ರೀ ನಾಥ್‌ಪೈ ಅವರು ಮೆಮೋರಾಂಡಮ್ಮಿಗೆ ಸೈನ್ ಹಾಕಬೇಕೆಂದು ನನ್ನನ್ನು ಕೇಳಿದರು. ಆಯೋಗದ ವರದಿಯನ್ನು ಒಪ್ಪಬೇಕೆಂದು ನಿರ್ಣಯವಾಗಿದೆ, ಅದಕ್ಕೆ ನಾನು ಬದ್ಧ ಎಂದು ಹೇಳಿ ನಾನು ಆ ಮೆಮೋರಾಂಡಮ್ಮಿಗೆ ಸಿಗ್ನೇಚರ್ ಹಾಕಲು ನಿರಾಕರಿಸಿದೆ ಎಂದು ಹೇಳಿದ್ದಾರೆ. ಈ ಗಡಿ ಪ್ರಶ್ನೆಯ ಬಗ್ಗೆ ಮಹಾಜನ್ ಅವರು ಕೊಟ್ಟಂತಹ ವರದಿಯ ಮೇಲೆ ಒಂದು ರೆಜಲ್ಯೂಷನ್ ಮೂವ್ ಮಾಡಿ ಅದನ್ನು ಒಪ್ಪಿಕೊಳ್ಳಬೇಕೆಂದು ನಿರ್ಣಯ ಆದಮೇಲೆ ಅದನ್ನು ಒಪ್ಪಿಕೊಳ್ಳಬೇಕು, ಆದ್ದರಿಂದ ಆ ರೀತಿ ನಿರ್ಣಯ ಆದಮೇಲೆ ಅದಕ್ಕೆ ನಾನು ಪಾರ್ಟಿ ಆಗುವುದಕ್ಕೆ ತಯಾರಿಲ್ಲ, ನಿಮ್ಮ ಮೆಮೋರಾಂಡಮ್ಮಿಗೆ ನಾನು ಸೈನ್ ಮಾಡುವುದಕ್ಕೆ ತಯಾರು ಇಲ್ಲ ಎಂದು ಹೇಳಿದ್ದೇನೆ, ಬೇಕಾದರೆ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ನಾನು ಚರ್ಚೆ ಮಾಡಿ ಇದನ್ನು ಹೇಳುತ್ತೇನೆ, ಒಂದು ವೇಳೆ ಇದರ ಬಗ್ಗೆ ಸ್ಪಷ್ಟೀಕರಣ ಅವಶ್ಯಕ ಇದ್ದರೆ ಸ್ಪಷ್ಟೀಕರಣ ನೀಡುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ, ಪ್ರಧಾನ ಮಂತ್ರಿಗಳಿಗೂ ನಾನು ಇದನ್ನು ಹೇಳಿದ್ದೇನೆ ಎಂದು ಹೇಳಿದ್ದಾರೆ. ಇದೇ ವಿಷಯವನ್ನು ನಾನು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತುಕತೆ ನಡೆಸುವಾಗ ಹೇಳಿದೆ. ಮತ್ತು ನಾನು ಸುಮಾರು ಅರ್ಧ ಗಂಟೆಯ ಕಾಲ ಈ ಗಡಿ ಸಮಸ್ಯೆಯ ಬಗ್ಗೆ ಪ್ರಧಾನಿಯವರ ಜೊತೆಯಲ್ಲಿ ಮಾತನಾಡಿದೆ. ಹಿಂದೆ ಇಬ್ಬರು ಆಫೀಸರುಗಳ ಮುಖಾಂತರ ಗಡೀ ಸಮಸ್ಯೆಯ ಬಗ್ಗೆ ಟೆಂಟೆಟೀವ್ ಪ್ರಪೋಜಲ್ಸ್ ಏನು ಬಂದಿದ್ದವು, ಅವುಗಳ ಬಗ್ಗೆ ಪ್ರಧಾನಿಯವರು ಡೈರೆಕ್ಟಾಗಿ ಪ್ರಸ್ತಾಪ ಮಾಡಬಹುದು ಎಂದು ನಾನು ನಿರೀಕ್ಷಿಸಿದ್ದೆ. ಆದರೆ ಅದರ ಬಗ್ಗೆ ಒಂದು ಶಬ್ದವೂ ಅವರಿಂದ ಬರಲಿಲ್ಲ. ಪ್ರಧಾನಿಯವರೇ ತಮ್ಮ ಸಲಹೆಗಳ ಬಗ್ಗೆ ಪ್ರಸ್ತಾಪಿಸಲಿಲ್ಲ. ಅವರೇ ಅದಕ್ಕೆ ಮಹತ್ವ ಕೊಡಲಿಲ್ಲ ಎಂಬ ಭಾವನೆ ನನಗೆ ಉಂಟಾಯಿತು. ಆದ್ದರಿಂದ ನಾನೂ ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗಲಿಲ್ಲ. ಬಹುಶಃ ನಾನು ಈ ಗಡಿ ಸಮಸ್ಯೆಯ ಬಗ್ಗೆ ಪ್ರಧಾನಿಯವರ ಪ್ರಪೋಜಲ್ಸ್ ಏನಿವೆ ಎಂಬುದನ್ನು ಕಾಗದದ ಮುಖಾಂತರ ತಿಳಿಸಬೇಕೆಂದು ಹಿಂದೆ ನನ್ನ ಹತ್ತಿರ ಬಂದಿದ್ದ ಇಬ್ಬರು ಆಫೀಸರುಗಳ ಮುಖಾಂತರ ಪ್ರಧಾನಿಯವರಿಗೆ ನಾನು ತಿಳಿಸಿದ್ದೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಷಯವನ್ನು ಅವರು ಪ್ರಸ್ತಾಪ ಮಾಡಲಿಲ್ಲವೋ ಏನೋ ಗೊತ್ತಿಲ್ಲ. ನಾನು ದೆಹಲಿಯಿಂದ ಬಂದಮೇಲೆ ಪತ್ರಿಕಾ ವರದಿಗಾರರಿಗೆ ನಾನು ಹೇಳಿದ್ದೇನೆ, ನಾನು ಪ್ರಧಾನಿಯವರ ಜೊತೆಯಲ್ಲಿ ಒಳ್ಳೆಯ ವಾತಾವರಣದಲ್ಲಿ ಈ ಗಡಿ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿದ್ದೇನೆ ಎಂದು. ಪ್ರಧಾನಿಯವರ ಹತ್ತಿರ ನಾನು ಕಳಕಳಿಯಿಂದ ವಿನಂತಿ ಮಾಡಿಕೊಂಡಿದ್ದು ಏನೆಂದರೆ ನಮಗೆ ನೀವು ಉಪಕಾರವನ್ನೇನೂ ಮಾಡಬೇಡಿ

ನ್ಯಾಯ ದೊರಕುವಂತೆ ಮಾತ್ರ ಮಾಡಿ ಎಂದು ಹೇಳಿದೆ. ಹಿಂದೆ ಮಹಾಜನ್ ಕಮಿಷನ್ ನೇಮಕ ವಾದಾಗ ಅವರು ಕೊಟ್ಟಂತಹ ತೀರ್ಮಾನವನ್ನು ಒಪ್ಪಿಕೊಳ್ಳುತ್ತೇವೆಂದು ಮಹಾರಾಷ್ಟ್ರದವರು ಅಗ್ರಿಮೆಂಟ್‌ಗೆ ಒಪ್ಪಿಕೊಂಡಿದ್ದ ಸ್ಟೇಟ್‌ಮೆಂಟನ್ನು ಹಿಡಿದು ಪ್ರಧಾನಿಯವರಿಗೆ ತೋರಿಸಿ, ಅವರು ಈ ಅಗ್ರಿಮೆಂಟ್ ಪ್ರಕಾರ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಲೇಬೇಕು, ಆದ್ದರಿಂದ ತಾವು ಒತ್ತಾಯ ಪೂರ್ವಕವಾಗಿ ಮಹಾರಾಷ್ಟ್ರದವರನ್ನು ಒಪ್ಪಿಸಬೇಕು, ನಮಗೆ ನ್ಯಾಯ ದೊರಕಿಸಬೇಕು, ಎಂದು ನಮ್ಮ ನಿಲುವು ಮತ್ತು ಮಹಾರಾಷ್ಟ್ರ ಯಾವ ರೀತಿ ಆಯೋಗದ ಸಿಫಾರಸ್ಸಿಗೆ ಒಪ್ಪಬೇಕು ಎಂಬುದಕ್ಕೆ ಬದ್ಧವಾಗಿದೆ ಎಂಬುದರ ಬಗ್ಗೆ ಪ್ರಧಾನಿಯವರಿಗೆ ನಾನು ನೆನಪು ಮಾಡಿಕೊಟ್ಟೆ. ಮತ್ತು ಈ ಗಡಿಯ ವಿಚಾರದಲ್ಲಿ ನಾವು ನ್ಯಾಯವನ್ನು ಅಪೇಕ್ಷೆ ಮಾಡುತ್ತೇವೆ, ನಮಗೆ ನ್ಯಾಯ ವನ್ನು ದೊರಕಿಸಿಕೊಡಿ ಎಂದು ಪ್ರಧಾನಿಯವರಿಗೆ ಹೇಳಿ ಬಂದೆ. ಈ ವಿಷಯದಲ್ಲಿ ಪ್ರಧಾನಿಯವರ ಜೊತೆಯಲ್ಲಿ ಮಾತುಕತೆ ನಡೆಯುವುದೇ ಇಲ್ಲವೇ ಯಾವಾಗ ನಡೆಯುತ್ತದೆ ಎಂಬುದನ್ನು ಹೇಳುವುದ ಕ್ಕಾಗುವುದಿಲ್ಲ. ಮೈಸೂರು ಮತ್ತು ಮಹಾರಾಷ್ಟ್ರ ಮುಖ್ಯ ಮಂತ್ರಿಗಳನ್ನು ಸೇರಿಸಿ ಮಾತನಾಡು ತ್ತಾರೋ ಎಂಬುದರ ಬಗ್ಗೆ ಪ್ರಧಾನಿಯವರಿಂದ ಪ್ರಸ್ತಾಪ ಬರಲಿಲ್ಲ. ಅಂತೂ ಅರ್ಧ ಗಂಟೆ ಪೂರ್ತಿ ಸಮಾಧಾನದಿಂದ ನನ್ನ ಜೊತೆಯಲ್ಲಿ ಪ್ರಧಾನಿಯವರು ಮಾತನಾಡಿದ್ದಾರೆ. ಅವರಿಗೆ ಮಹಾರಾಷ್ಟ್ರ ಯಾವ ರೀತಿ ಆಯೋಗದ ಸಿಫಾರಸ್ಸಿಗೆ ಒಪ್ಪಬೇಕು ಎಂಬುದಕ್ಕೆ ಬದ್ಧವಾಗಿದೆ ಎಂಬುದನ್ನು ತಿಳಿಸಿ ವಿವಾದದ ಬಗ್ಗೆ ಅವರಿಗೆ ಸಮಾಧಾನವಾಗಲು ವಿಷಯಗಳು ಜ್ಞಾಪಕಕ್ಕೆ ಬರುವಂತಾಗಲು ನಾನು ವಿಶ್ವಪ್ರಯತ್ನ ಮಾಡಿದ್ದೇನೆ. ಇದು ಒಳ್ಳೆಯ ವಾತಾವರಣದಲ್ಲಿ ನಡೆದಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ನಮಗೆ ಅನ್ಯಾಯವಾಗಲಾರದು ಎನ್ನುವ ಭಾವನೆ ನನ್ನ ಮನಸ್ಸಿ ನಲ್ಲಿ ಮೂಡಿದೆ. ಅದೆಲ್ಲ ಅವರ ಸಮ್ಮುಖದಲ್ಲಿ ಆಗಿರುವ ವಿಚಾರವಾಗಿರುವುದರಿಂದ ಈ ಮಾನ್ಯ ಸಭೆಯಲ್ಲಿ ಯಾವ ತರಹ ನಿರ್ಣಯ ಪಾಸ್ ಆಗಿತ್ತೋ ಅದರ ಹಾದಿ ತಪ್ಪದೆ, ಅದೇ ಪ್ರಕಾರ ನಾನು ಅಲ್ಲಿ ಮಾತುಕತೆ ಆಡಿ ಬಂದಿದ್ದೇನೆ. ಅದು ಮುಂದೆ ಯಾವುದೇ ತರಹ ಡೆವಲಪ್‌ಮೆಂಟ್ ಆಗುತ್ತ ದೆಂದು ಇವತ್ತು ಹೇಳುವ ಪರಿಸ್ಥಿತಿಯಲ್ಲಿಲ್ಲ. ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿ ಮತ್ತು ಮಾನ್ಯ ಶ್ರೀ ಜಗಜ್ಜೀವನರಾಂ ಅವರ ಮನವಲಿಸುವುದಕ್ಕೆ ಎಲ್ಲಾ ವಿಚಾರಗಳನ್ನು ಅವರ ಮುಂದೆ ಇಟ್ಟು ಬಂದಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ತಾವು ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಭೇಟಿಯಾದ ಸಂದರ್ಭ ಫೋಟೋದಲ್ಲಿ ನೋಡಿದೆ. ತಾವು ನಗುತ್ತಾ ಇರುವುದನ್ನು ಕಂಡೆ. ತಾವು ಏನಾದರೂ ತಮ್ಮ ಸಂಕಷ್ಟಗಳನ್ನು ಅವರ ಮುಂದೆ ಹೇಳಿದಿರೋ ? ಅದು ಒಂದು ವಿಷಯ. ಎರಡನೆಯದು ತಾವು ರಾಷ್ಟ್ರಪತಿಯವರನ್ನು ಭೇಟಿ ಮಾಡಿದ್ದು ಕಾಣಲಿಲ್ಲ. ಮೂರನೆಯದು ಕಾಂಗ್ರೆಸ್ (ಆರ್) ರಾಜ್ಯದಲ್ಲಿ ವಾಕ್‌ಔಟ್ ಮಾಡಿದ್ದು, ನಿರ್ಣಯವನ್ನು ವಿರೋಧ ಮಾಡಿದ್ದು, ಮತ್ತೆ ಪುನಃ ತಿದ್ದುಪಡಿ ಮಾಡಿದ್ದು—ಈ ವಿಷಯಗಳು ಅವರಿಗೆಲ್ಲರಿಗೂ ತಿಳಿದಿದೆ. ಆದ್ದರಿಂದ ಆ ರೀತಿಯಾಗಿ ಏನಾದರೂ ಆದೇಶಗಳನ್ನು ಅವರು ಕೊಟ್ಟಿದ್ದಾರೆಯೇ ? ಈ ಮೂರು ವಿಷಯಗಳನ್ನು ತಿಳಿಸಿಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಫೋಟೊ ತೆಗೆದುಕೊಂಡಿದ್ದು ನಿಜ. ನಾವಿಬ್ಬರೂ ನಗುತ್ತಾ ಫೋಟೋ ತೆಗೆದುಕೊಂಡಿರಬಹುದು ನಾವು ಜಗಳ ವಾಡಲು ವೈರಿಗಳಲ್ಲ, ಎರಡು ದಿವಸಗಳು ಅವರು ನಾವು ಎರಡು ದಿವಸಗಳಕಾಲ ಜೊತೆಯಲ್ಲಿದ್ದು. ಪ್ಲಾನಿಂಗ್ ಸಂಬಂಧವಾಗಿ ಮಾತನಾಡಿದ್ದೇವೆ. ಗಡೀ ಪ್ರಶ್ನೆ ಬಗ್ಗೆ ಒಂದು ಚಕಾರ ಶಬ್ದವನ್ನೂ ಸಹ ಅವರು ಆಡಲಿಲ್ಲ, ನಾನೂ ಮಾತನಾಡಲಿಲ್ಲ. ಆದರೆ ಒಂದು ಮಾತು. ರಾಷ್ಟ್ರಾಧ್ಯಕ್ಷರನ್ನು ನಾನು ಕಂಡಿದ್ದೆ. ಆದರೆ ಈ ವಿಚಾರದ ಬಗ್ಗೆ ಅಲ್ಲ. ಅವರು ರಾಷ್ಟ್ರಪತಿಗಳಾದಮೇಲೆ ನಾನು ಅನೇಕಬಾರಿ ಹೋಗಿದ್ದೇನೆ. ನಾನು ಮುಖ್ಯಮಂತ್ರಿಯಾಗಿ ಡಿಲ್ಲಿಗೆ ಹೋಗಿ ಈಗ ಎರಡು ದಿನಗಳು ಆಗಿದ್ದರೂ ಕರ್ಣಾಟಕದ ವಿಷಯವಾಗಿ ಪ್ರಸ್ತಾಪಮಾಡಲಿಲ್ಲ.

ಮೂರನೆಯದಾಗಿ ಕಾಂಗ್ರೆಸ್ (ಆರ್) ವಾಕ್‌ಔಟ್ ಮಾಡಿದ ಬಗ್ಗೆ ಆದೇಶ ಬಂದಿದೆಯೋ ಏನೋ ಎಂಬುದಾಗಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ನಾನು ಬಹುಶಃ ಪ್ರಧಾನ ಮಂತ್ರಿ ಮತ್ತು ಶ್ರೀ ಜಗಜೀವನರಾಂ ಅವರ ಹತ್ತಿರ ಚರ್ಚೆಮಾಡಿದಾಗ ಈ ವಿಷಯ ಬರಲಿಲ್ಲ. ಅವರು ಆ ರೀತಿ ಏನೂ ಹೇಳಲಿಲ್ಲ. ಅಲ್ಲಿ ಪಾರ್ಲಿಮೆಂಟಿನ ಎಲ್ಲಾ ಪಕ್ಷದ ಸದಸ್ಯರು 4 ದಿವಸಗಳ ಕಾಲ ಅಲ್ಲಿಗೆ ಬಂದಿದ್ದರು. ಅವರಲ್ಲಿ ಈ ತರಹ ಭಾವನೆ ಕಂಡುಬರಲಿಲ್ಲ. ಈ ಪ್ರಸಂಗದಲ್ಲಿ ನಾವೆಲ್ಲರೂ ಒಂದೇ ರೀತಿಯಾಗಿದ್ದೆವು.

ಶ್ರೀ ಎಸ್. ಗೋಪಾಲಗೌಡ.—ತಾವು ಬೆಳಗಾಂಗೆ ಹೋಗಿದ್ದಿರಿ. ಮಾನ್ಯ ಶ್ರೀ ಕೃಷ್ಣಪ್ಪ ನವರನ್ನು ಭೇಟಿಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಬಂದಿರಲಿಲ್ಲ. ಅವರ ಕಡೆಯ ಪಾರ್ಟಿಯ ಉಳಿಕಿ ಸದಸ್ಯರು ಬಂದಿದ್ದರು.

ಶ್ರೀ ಕೆ. ಪ್ರಭಾಕರ್.—ಪ್ರಧಾನಮಂತ್ರಿಗಳ ಹತ್ತಿರ ನೀವು ಹೋಗುವ ಅವಕಾಶವಿತ್ತೆಂದು ಹೇಳಿದಿರಿ. ಅವರೇ ನಿಮ್ಮನ್ನು ಕರೆದಿದ್ದರೋ ಅಥವಾ ತಾವೇ ಬರೆದು ಅವಕಾಶಮಾಡಿಕೊಂಡಿದ್ದಿರೋ ?

ಶ್ರೀ ವಿರೇಂದ್ರ ಪಾಟೀಲ್.—ಏನು ಪ್ರಶ್ನೆ ಇದು !

ಶ್ರೀ ಎಸ್. ಗೋಪಾಲಗೌಡ.—ತಾವು ನಮ್ಮೊಂದಿಗೆ ಹೇಳಿದ ಹಾಗೆ ಅವರಲ್ಲಿ ಯಾವ ಭಾಷೆಯಲ್ಲಿ ಮಾತನಾಡಿದ್ದೀರಿ? ತಾವು ಅಲ್ಲಿ ಹೋದಾಗ್ಗೆ ಅಲ್ಲಿನ ಕಾರ್ಯಕ್ರಮವನ್ನು ಮುಗಿಸುವುಕ್ಕೆ ಎಷ್ಟು ಹೊತ್ತು ಹಿಡಿಯಿತು ? ತಮ್ಮ ಜೊತೆಯಲ್ಲಿ ಮೈಸೂರಿನವರು ಯಾರಾದರೂ ಆ ವೇಳೆಯಲ್ಲಿ ಇದ್ದರೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿದ್ದೆ. ಪ್ರಧಾನ ಮಂತ್ರಿಗಳು ಕರೆದಾಗ ನಾನು ಹೋಗಬೇಕೆಂದಲ್ಲ. ಮುಖ್ಯಮಂತ್ರಿಯಾಗಿ ನಾನೇ ಅನೇಕ ಸಾರಿ ಹೋಗಬೇಕಾಗುತ್ತದೆ. ಅವರು ಕರೆಯಬಹುದು, ಕರೆಯದೆಯೇ ಇರಬಹುದು. 20ನೇ ತಾರೀಖು ಹೋದ ತಕ್ಷಣ ಪ್ರಧಾನ ಮಂತ್ರಿಗಳಿಗೆ ಈ ವಿಷಯಗಳನ್ನು ತಿಳಿಸಿದ್ದೇನೆ. ಪ್ರಧಾನ ಮಂತ್ರಿಗಳಿಗೆ ಯಾವಾಗ ಬಿಡುವು ಇರುತ್ತದೋ ಎಂಬುದನ್ನು ತಿಳಿದುಕೊಂಡು ಹೊರಗಡೆಗೆ ಹೋದಾಗ ಅರ್ಧ ಗಂಟೆಕಾಲದ ಮೇಲೆಯೇ ಮಾತನಾಡಿದ್ದೇನೆ. ನಾನು ಅವರಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡಿದೆನೇ ಅಥವಾ ಮತ್ತಾವ ಭಾಷೆಯಲ್ಲಿ ಮಾತನಾಡಿದೆನೇ ಎಂಬುದು ಬೇರೆ ವಿಷಯ. ನನಗೆ ಹಿಂದಿ, ಉರ್ದು ಮತ್ತು ಇಂಗ್ಲಿಷ್ ಬರುತ್ತದೆ. ಮತ್ತು ಇತರ ಭಾಷೆಗಳೂ ಸಹ ಬರುತ್ತವೆ, ಬಹಳ ಮಟ್ಟಿಗೆ ಇಂಗ್ಲಿಷ್, ಸ್ವಲ್ಪ ಮಟ್ಟಿಗೆ ಉರ್ದುನಲ್ಲಿ ಮಾತನಾಡಿದ್ದೇನೆ. ಆದರೆ ಮಾನ್ಯ ಶ್ರೀ ಜಗಜೀವನರಾಂ ಅವರ ಜೊತೆಯಲ್ಲಿ ಪೂರ್ತಿಯಾಗಿ ನಾನು ಹಿಂದಿಯಲ್ಲಿ ಮಾತನಾಡಿದ್ದೇನೆ. ನಾನು ಜೊತೆಯಲ್ಲಿ ಯಾರನ್ನೂ ಕರೆದುಕೊಂಡು ಹೋಗಿರಲಿಲ್ಲ. ನಾವಿಬ್ಬರೇ ಇದ್ದೆವು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಅವರು ನಿಮ್ಮನ್ನು, ಹೋಗುವುದು ಹೋಗುತ್ತೀರಿ, ಊಟ ಮಾಡಿ ಹೋಗಿ ಎಂದು ಹೇಳಿದರೋ ಇಲ್ಲವೋ ?

ಶ್ರೀ ಎಂ ನಾಗಪ್ಪ.—ಪ್ರಧಾನ ಮಂತ್ರಿಗಳು ಕೇಂದ್ರ ಸರಕಾರದ ಇಬ್ಬರು ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿಕೊಟ್ಟು ಅವರು ಹೇಳಿರತಕ್ಕ ಸೂತ್ರಗಳನ್ನು ಕೈಬಿಟ್ಟಿದ್ದಾರೆಂದು ಭಾವಿಸಿದ್ದೀರೋ ? ಅದರ ಬಗ್ಗೆ ಏನು ಆಲೋಚನೆ ಮಾಡುತ್ತಿದ್ದಾರೆ ? ನಿಮಗೂ ಅವರಿಗೂ ಆದ ಮಾತುಕತೆಗಳೇನು ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಅಷ್ಟು ಗಹನವಾಗಿ ನಾವು ತೆಗೆದುಕೊಳ್ಳಲಿಲ್ಲ. ಆ ಮಾತುಕತೆಗಳ ಬಗ್ಗೆ ಏನೂ ಪ್ರಸ್ತಾಪ ಮಾಡಲಿಲ್ಲ.

ಶ್ರೀ ಮಹದೇವ್ ಜಿ. ಬಣಕಾರ್.—ಬೆಳಗಾವಿ ಇಭ್ಭಾಗದ ಬಗ್ಗೆ ಯಾವುದೇ ಒಂದು ಸಲಹೆ ಬಂದಿರುವ ಕಾರಣ ಅದರಿಂದ ಕರ್ನಾಟಕ ಜನತೆಯಲ್ಲಿ ಎಷ್ಟರಮಟ್ಟಿಗೆ ಕಳವಳ ಉಂಟಾಗಿದೆ ಎಂಬುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಅದರ ಬಗ್ಗೆ ಅವರು ತಮ್ಮ ಎದುರಿಗೆ ಈ ವಿಷಯವನ್ನು ಪ್ರಸ್ತಾಪ ಮಾಡದೇ ಇರುವಾಗ ಅವರು ಯಾರೋ ಪ್ರಭಾವಕ್ಕೆ ಒಳಗಾಗಿ ಅಥವಾ ಒತ್ತಾಯದ ಮೇಲೆ ಈ ರೀತಿ ಮಾಡಿದ್ದಾರೆಂದು ಕೆಲವರು ಈಗಾಗಲೇ ಅರ್ಥ ಮಾಡಿಕೊಂಡಿದ್ದಾರೆ. ಏಕೆ ಪ್ರಧಾನ ಮಂತ್ರಿಗಳು ಈ ವಿಚಾರವಾಗಿ ಮಾತನಾಡಲಿಲ್ಲ ? ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿ ಏನು ಹೇಳಿದ್ದು ಮತ್ತು ಅವರ ದೃಷ್ಟಿಯಲ್ಲಿ ಏನಿದೆಯೆಂಬುದನ್ನು ಹೇಳಬೇಕು. ಇನ್ನು ಕೆಲವರು ಈ ಪ್ರಸ್ತಾಪ ಮಾಡಲಿಲ್ಲ, ಇದು ಮಧ್ಯೆ ಬಂತು ಎಂದು ಅನಾವಶ್ಯಕವಾಗಿ ಮಾತನಾಡುತ್ತಿದ್ದಾರೆಂದು ಹೇಳುತ್ತಾರೆ. ಇದರ ಅರ್ಥವೇನು ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಊಹೆಯ ಪ್ರಶ್ನೆ ಇದೆ. ಒಳ್ಳೆಯ ವಾತಾವರಣದಲ್ಲಿ ಚರ್ಚೆ ನಡೆಯಿತು. ಒಂದುವೇಳೆ ಆ ವಿಚಾರಗಳ ಬಗ್ಗೆ ಅವರು ಸೀರಿಯಸ್ ಆಗಿದ್ದರೆ ನಾನು ಅದರ ಬಗ್ಗೆ ವಿಚಾರ ಮಾಡುತ್ತಿದ್ದೆ. ಆಗ ನನಗೂ ನಾನಾ ವಿಚಾರಗಳನ್ನು ಹೇಳುವುದಕ್ಕೆ ಅವಕಾಶವಾಗುತ್ತಿತ್ತು. ಆ ಪ್ರೊಪೋಸಲ್ಸ್ ಬಗ್ಗೆ ನಾನಾ ವಿಚಾರಗಳನ್ನು ವ್ಯಕ್ತ ಮಾಡುವುದಕ್ಕೆ ಅವಕಾಶಸಿಗಲಿಲ್ಲ. ಪ್ರಧಾನಮಂತ್ರಿಗಳು ಆ ವಿಚಾರವಾಗಿ ಚರ್ಚೆ ಮಾಡದೇ ಇರುವುದರಿಂದ, ಆ ಪ್ರೊಪೋಸಲ್ ಟೆಂಟೆಟಿವ್ ಎಂಬುದಾಗಿ ಲಿಖಿತ ಮೂಲಕ ತಿಳಿಸಿರುವುದರಿಂದ ಅದರ ಬಗ್ಗೆ ಅಷ್ಟೊಂದು ಸೀರಿಯಸ್ ಆಗಿಲ್ಲ ಮತ್ತು ಪ್ರಸ್ತಾಪ ಮಾಡಲಿಲ್ಲವೆಂಬ ಭಾವನೆ ಬಂದಿದೆ. ಆದ್ದರಿಂದ ಅದರ ಬಗ್ಗೆ ಊಹಾಪೋಹ ಹೊರಗಡೆ ನಡೆದರೆ ಅದಕ್ಕೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಬೇರೆಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳ ಜೊತೆಯಲ್ಲಿ ತಮ್ಮನ್ನು ಸ್ವಾಗತಿಸಿದ್ದಾರೆಂದು ನಮಗೆ ಗೊತ್ತಾಗಿದೆ. ನಮ್ಮ ನೆರೆಹೊರೆಯ ರಾಜ್ಯಗಳಾಗಿರತಕ್ಕ ತಮಿಳುನಾಡು ಮತ್ತು ಆಂಧ್ರ ಮುಖ್ಯಮಂತ್ರಿಗಳು ಕನ್ನಡ ರಾಜ್ಯದ ಬಗ್ಗೆ ಮಹಾಜನ್‌ವರದಿ ವಿಷಯದಲ್ಲಿ ಏನಾದರೂ ಪ್ರಸ್ತಾಪ ಮಾಡಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೇ ದಿವಸ ಪತ್ರಿಕೆಯಲ್ಲಿ ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಪ್ರತಿಕ್ರಿಯೆ ಬಂದಿವೆಯೆಂದು ಹೇಳಿದ್ದಾರೆ. ಈ ಪ್ರಶ್ನೆಯನ್ನು ಆದಷ್ಟು ಜಾಗ್ರತೆಯಾಗಿ ಪ್ರಧಾನಮಂತ್ರಿಗಳು ತೀರ್ಮಾನ ಮಾಡತ್ತಾರೆಂದು ಹೇಳಿರುವುದು ತಮಗೆ ಆಶಾದಾಯಕವಾಗಿದೆ ಯೆಂದು ಹೇಳಿದ್ದಾರೆ. ಈ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಂದು ಹೇಳಿರುವ ಅಭಿಪ್ರಾಯವೇನು ?

ಶ್ರೀ ಡಿ. ಎಂ. ಸಿದ್ದಯ್ಯ.—ಮೈಸೂರು—ಮಹಾರಾಷ್ಟ್ರ ಗಡಿಯ ವಿಚಾರ ಇತ್ಯರ್ಥ ಮಾಡುವುದಕ್ಕೆ ಅಧಿಕಾರಿಗಳನ್ನು ಹಿಂದೆ ಕಳುಹಿಸಿಕೊಟ್ಟಿದ್ದರು. ಆಗ ಇದರ ಸಂಬಂಧವಾಗಿ ಚರ್ಚೆಮಾಡಿದ್ದೀರಿ. ತಾವು ಅವರಿಗೆ ಬರೆದು ಕಳುಹಿಸಿ ಎಂದು ಹೇಳಿದರೆ ಅವರು ಬರೆದು ಕಳುಹಿಸಲಿಲ್ಲ. ಆಗ ಅವರು ತಮ್ಮನ್ನು ಭೇಟಿಮಾಡಿ ಎಂಬುದಾಗಿ ಹೇಳಿದ್ದಾರೆ. ಆಗ ತಕ್ಷಣವೇ ತೀರ್ಮಾನವಾಗುವ ಶಂಕೆ ಉದ್ಭವವಾಯಿತು. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗಿಗೆ ಹೋದಾಗ್ಗೆ ತಮ್ಮ ಅಭಿಪ್ರಾಯವನ್ನು ಅಲ್ಲಿ ತಿಳಿಸುತ್ತೇನೆಂದು ಹೇಳಿದಿರಿ. ನಂತರ ಅನೇಕ ಅಭಿಪ್ರಾಯಗಳು ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಾಗ ಆಶ್ಚರ್ಯವಾಯಿತು. ಈ ಸಮಸ್ಯೆ ಬಹಳ ಬೃಹದಾಕಾರವಾಗಿ ಬೆಳೆಯಿತು. ಆಮೇಲೆ ಶಾಂತರೀತಿಯಿಂದ ಇದು ತೀರ್ಮಾನವಾಗುತ್ತದೆ, ನ್ಯಾಯ ದೊರಕುತ್ತದೆಂಬ ನಂಬಿಕೆ ಉಂಟಾಗಿದೆ. ಬಹಳ ಸಂತೋಷ. ನನಗನ್ನಿಸುತ್ತದೆ, ಈ ತರಹ ಮುಖ್ಯ ಸಮಸ್ಯೆಗಳು ಉದ್ಭವಿಸಿದಾಗ ಮಹಾ ಪ್ರಧಾನಿಯವರನ್ನು ಕಂಡು ನಮ್ಮ ಪಕ್ಷದ ಅಭಿಪ್ರಾಯವನ್ನು ಅವರ ಮುಂದೆ ಇಟ್ಟರೆ ಅವರು ಸಾವಧಾನದಿಂದ ಕೇಳುತ್ತಾರೆ ತಾವು ಆ ರೀತಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ವಿಚಾರಗಳನ್ನು ತಿಳಿಸುತ್ತಾ ಇದ್ದರೆ, ತಾವು ಮುಖ್ಯಮಂತ್ರಿಗಳಾಗಿರುವಾಗ ನಮ್ಮ ದೇಶಕ್ಕೆ ಸೌಖ್ಯವಾದೀತೆಂದು ತಿಳಿದಿದ್ದೇನೆ.

ಶ್ರೀ ಎನ್. ಲೋಕಯ್ಯ ನಾಯಕ್.—ಮಾನ್ಯ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾಗ ಕಾಸರಗೋಡು ವಿಷಯದ ಪ್ರಸ್ತಾಪ ಬಂತೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ಮುನಿಸ್ವಾಮಯ್ಯನವರು ಕೇಳಿದ್ದಾರೆ, ಆಂಧ್ರ ಪ್ರಾಂತ ಮತ್ತು ತಮಿಳುನಾಡು ನಮಗೆ ನೆರೆನಾಡುಗಳು, ಅವರಿಗೆ ಏನಾದರೂ ಇದರ ಬಗ್ಗೆ ತಿಳಿಸಿದಿರಾ ಎಂದು. ನಾನು ಆ ಒಂದು ಪ್ರಯತ್ನಕ್ಕೆ ಕೈ ಹಾಕಲ್ಲ. ಏಕೆಂದರೆ ನಮಗೆ ನ್ಯಾಯ ಸಿಕ್ಕಬೇಕಾದ್ದು ಕೇಂದ್ರ ಸರ್ಕಾರದಿಂದ ಈ ಒಂದು ವಿವಾದವನ್ನು ಬಗೆಹರಿಸಬೇಕಾದ್ದು, ಜಗಳ ಬಗೆಹರಿಸಬೇಕಾದ್ದು ಕೇಂದ್ರ ಸರ್ಕಾರ. ಆದಕ್ಕಾಗಿ ಈ ಹೊತ್ತು ನಾವು ನಮ್ಮ ನೆರೆ ಪ್ರಾಂತಗಳಿಗೆ ಸಹಾಯ ಮಾಡಿ ಎಂದು ಕೇಳಬೇಕಾದ ಪರಿಸ್ಥಿತಿ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಆ ರೀತಿ ಮಾಡಲಿಕ್ಕೆ ಹೋದರೆ ಕೇಂದ್ರದವರು ನಮ್ಮನ್ನು ಜಾರಿ ಬಿಟ್ಟಂತೆ ಕಾಣುತ್ತದೆ, ಅದಕ್ಕಾಗಿ ತಮ್ಮ ತಮ್ಮ ಪ್ರಯತ್ನ ಮಾಡಿಕೊಳ್ಳುತ್ತಾರೆ ಎನ್ನುವ ಭಾವನೆ ಬರಬಹುದು. ನಾನು ಆ ಕೆಲಸಕ್ಕೆ ಕೈಹಾಕಿಲ್ಲ.

ಶಾಸನ ಸಭಾ ಸದಸ್ಯರ ಡೆಲಿಗೇಷನ್ ಹೋಗಿದ್ದಾಗ ಕೆಲವು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದಾರೆಂದು ಕೇಳಿದ್ದೇನೆ. ಸವಿಸ್ತಾರವಾಗಿ ಏನೇನಾಯಿತು ಎಂದು ತಿಳಿದುಕೊಳ್ಳುವುದಕ್ಕೆ ನನಗೆ ಸಾಕಷ್ಟು ಅವಕಾಶ ಸಿಕ್ಕಲಿಲ್ಲ.

ಮಾನ್ಯ ಬೊಮ್ಮಾಯಿ ಅವರು ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಇಂಪ್ರೆಷನ್ ಬಗ್ಗೆ ಮತ್ತು ನನ್ನ ಇಂಪ್ರೆಷನ್ ಬಗ್ಗೆ ಕೇಳಿದರು. ಮಹಾರಾಷ್ಟ್ರ ಮುಖ್ಯ ಮಂತ್ರಿಯವರ ಇಂಪ್ರೆಷನ್ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದೆ. ಅವರು ಪ್ರಧಾನಿಯವರನ್ನು ಪ್ರತ್ಯೇಕವಾಗಿ ಕಂಡಿದ್ದಾರೆ. ಅವಾಗ ಏನು ಮಾತನಾಡಿದರು ಎನ್ನುವಂಥದ್ದು ನನಗೆ ಗೊತ್ತಿಲ್ಲ. ನಾನು ಮಾತನಾಡಿದಾಗ ನನಗೆ ಏನು ಇಂಪ್ರೆಷನ್ ಬಂತು ಎನ್ನುವುದನ್ನು ಹೇಳಿದ್ದೇನೆ. ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಮಾತನಾಡಿದಾಗ ಅವರಿಗೆ ಏನು ಇಂಪ್ರೆಷನ್ ಬಂತು ಎನ್ನುವುದನ್ನು ಅವರು ಹೇಳಬೇಕು. ಅವರಿಗೆ ಏನು ಇಂಪ್ರೆಷನ್ ಆಗಿದೆ ಆ ಇಂಪ್ರೆಷನ್ ನನಗೆ ಇಗಿಲ್ಲ.

ಮಾನ್ಯ ಡಿ. ಎಂ. ಸಿದ್ದಯ್ಯನವರು ಕೇಳಿದ್ದಾರೆ, ಈ ರೀತಿ ಮೇಲಿಂದ ಮೇಲೆ ಡೆಲ್ಲಿಗೆ ಹೋಗಿ ಅವರಿಗೆ ವಿಷಯಗಳನ್ನು ತಿಳಿಸಿದರೆ ಬಹಳಮಟ್ಟಿಗೆ ಮನವರಿಕೆಯಾಗುತ್ತದೆ, ನ್ಯಾಯ ಸಿಕ್ಕುತ್ತದೆ, ಏಕೆ ಈ ತರಹ ಸಮಸ್ಯೆಗಳು ಬಂದಾಗ ಡೆಲ್ಲಿಗೆ ಹೋಗಬಾರದು ಎಂದು ಕೇಳಿದರು. ಮಾನ್ಯ

(ಶ್ರೀ ವೀರೇಂದ್ರ ಪಾಟೀಲ್)

ಸದಸ್ಯರಲ್ಲಿ ಒಂದು ತಪ್ಪು ಭಾವನೆ ಇದ್ದ ಹಾಗೆ ಕಾಣುತ್ತದೆ. ಹೋದ ಸಲ ಪ್ರಧಾನ ಮಂತ್ರಿಯವರು ಕರೆದಾಗ ಡೆಲ್ಲಿಗೆ ಹೋಗುವುದಕ್ಕೆ ಬುದ್ಧಿ ಪೂರ್ವಕ ತಪ್ಪಿಸಬೇಕು ಎನ್ನುವ ಭಾವನೆ ನನಗೆ ಇರಲಿಲ್ಲ. ಆಗ ನನ್ನ ಆರೋಗ್ಯ ಚೆನ್ನಾಗಿರಲಿಲ್ಲ. ಪ್ರಧಾನ ಮಂತ್ರಿಯವರು ಕರೆದಾಗ ಮುಖ್ಯ ಮಂತ್ರಿಯಾದವನು ಬರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಹೋಗಬೇಕಾದ್ದು ನಮ್ಮ ಕರ್ತವ್ಯವಾಗಿರುತ್ತದೆ. ನಾನು ಕಾಯಿಲೆ ಇದ್ದೇನೆ, ಇನ್ನು ಎರಡು ಮೂರು ದಿವಸ ನಿಂತು ಬರುತ್ತೇನೆ, ಅದರ ಮೇಲೆ ಬರಲೇ ಬೇಕು ಎಂದರೆ ನಾಳೆಯೇ ಹೊರಡುತ್ತೇನೆ ಎಂದು ಹೇಳಿದಾಗ ಬರಬೇಕಾದ ಅವಶ್ಯಕತೆ ಇಲ್ಲ. ಬೇಕಾದಾಗ ಒಂದು ಪತ್ರಕೊಟ್ಟು ಕರೆಸಿಕೊಳ್ಳುತ್ತೇನೆ ಎಂದು ಹೇಳಿದರು. ಈ ಮಧ್ಯೆ ಇಬ್ಬರು ಅಧಿಕಾರಿಗಳು ಬಂದರು, ಪ್ರಪೋಸಲ್ಸ್ ಬಂತು. ಬರವಣಿಗೆಯಲ್ಲಿ ಬೇಕು ಎಂದು ಹೇಳಿದ ಮೇಲೆ ಅವರು ಹೊರಟು ಹೋದರು. ಡೆಲ್ಲಿಗೆ ಹೋಗಿದ್ದಾಗ ಪ್ರಧಾನ ಮಂತ್ರಿಯವರ ಜೊತೆಯಲ್ಲಿ ಭೇಟಿಯಾಗಿದ್ದೇನೆ, ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಪ್ರಧಾನ ಮಂತ್ರಿಯವರು ಕರೆದಾಗ ಹಿಂದುಮುಂದು ನೋಡುವುದಿಲ್ಲ ಫೆಡರಲ್ ಟೈಪ್ ಆಫ್ ಗವರ್ನಮೆಂಟ್‌ನಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಯಾವತ್ತಿಗೂ ಆ ಒಳ್ಳೆಯ ರೀತಿಯಿಂದ ನಡೆದುಕೊಳ್ಳಬೇಕು, ಒಳ್ಳೆಯ ವಾತಾವರಣ ಬೆಳೆಸಬೇಕು. ಇದನ್ನು ಮಾನ್ಯ ಸದಸ್ಯರು ಒಪ್ಪಿರಬಹುದು. ಪ್ಲಾನಿಂಗ್ ಕಮಿಷನ್‌ನಿಂದ ಮೊನ್ನೆ ಏನು ಪ್ಲಾನ್ ಫೈನಲೈಸ್ ಆಯಿತು, ನಮ್ಮದು 350 ಕೋಟಿ ರೂಪಾಯಿ ಪ್ಲಾನ್ ಆಗಿದೆ. ಬಹುಶಃ ಪ್ಲಾನಿಂಗ್‌ನಲ್ಲಿ ಸಹಾಯ ಮಾಡಲಾರದೆ ಹೋಗಿದ್ದರೂ ನಾನ್‌ಪ್ಲಾನ್ ಕೋಟದಲ್ಲಿ ಅದನ್ನು ತುಂಬಿದ್ದಾರೆ. 104 ಕೋಟಿ ರೂಪಾಯಿ ಕೇಂದ್ರ ಸರ್ಕಾರದವರು ಸ್ಪೆಷಲ್ಲಾಗಿ ಕೊಟ್ಟಿದ್ದಾರೆ. ಕೊಡಲಾರದೆ ಹೋಗಿದ್ದರೆ 350 ಕೋಟಿ ರೂಪಾಯಿ ಪ್ಲಾನ್ ಆಗುವುದಕ್ಕೆ ಕಷ್ಟವಿತ್ತು. ಪ್ಲಾನಿಂಗ್ ಕಮಿಷನ್ ಬೆಂಬಲ ಸಲ್ಪ ಮಟ್ಟಿಗೆ ಬಂದಿದೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ನಾನು ಪ್ಲಾನಿಂಗ್ ಕಮಿಷನ್ನಿಗೂ ಮತ್ತು ಪ್ರಧಾನ ಮಂತ್ರಿಯವರಿಗೂ ಧನ್ಯವಾದಗಳನ್ನು ಕೊಟ್ಟಿದ್ದೇನೆ ಮತ್ತು ಬಹಳಮಟ್ಟಿಗೆ ನೆರವಾಗಿದ್ದೀರಿ, ಇಲ್ಲದೆ ಇದ್ದರೆ 350 ಕೋಟಿ ರೂಪಾಯಿ ಪ್ಲಾನ್ ನಮ್ಮದು ಆಗುತ್ತಿರಲಿಲ್ಲ ಎಂದು ಹೇಳಿದ್ದೇನೆ. ಈ ರೀತಿಯಿಂದ ನಮ್ಮ ಮತ್ತು ಕೇಂದ್ರ ಸರ್ಕಾರದ ಬಾಂಧವ್ಯ ಮಧುರವಾಗಿದೆಯೇ ಹೊರತು ಬಿಟ್ಟರ್‌ನೆಸ್ ಇಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲಿಯಾದರೂ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬರುತ್ತದೆ, ಎಂದು ಕಂಡುಬಂದರೆ ಅವಾಗ ಮುಖ್ಯ ಮಂತ್ರಿಯಾಗಿ ರಾಜ್ಯದ ಹಿತರಕ್ಷಣೆ ಮಾಡಬೇಕಾದ ಅವಶ್ಯಕತೆ ಬರುತ್ತದೆ. ಎಲ್ಲಿ ರಾಜ್ಯದ ಹಿತರಕ್ಷಣೆ ದಕ್ಕೆ ಬರುತ್ತದೆ. ಎಲ್ಲಿ ಪರಿಸ್ಥಿತಿ ಗುರುತರವಾಗಿರುತ್ತದೆ, ಅವಾಗ ಜವಾಬ್ದಾರಿ ಸ್ಥಾನದಲ್ಲಿರುವುದರಿಂದ ನಮ್ಮ ಹಿತರಕ್ಷಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಎಲ್ಲಿ ನಮಗೆ ಉಪಕಾರ ಮಾಡುತ್ತಾರೆ, ಸಹಾಯ ಮಾಡುತ್ತಾರೆ, ಸಹಕಾರ ಮಾಡುತ್ತಾರೆ ಅಂಥ ಉಪಕಾರವನ್ನು ಸ್ಮರಿಸಿಕೊಳ್ಳಬೇಕು. ಆ ಒಂದು ಧೋರಣೆಯನ್ನು ನಾನು ತಾಳಿದ್ದೇನೆ ಮತ್ತು ಅದನ್ನೇ ಮುಂದುವರಿಸಿಕೊಂಡು ಹೋಗುತ್ತೇನೆ.

ಶ್ರೀ ಲೋಕಯ್ಯ ನಾಯಕ್ ಅವರು ಕಾಸರಗೋಡ್ ವಿಚಾರವಾಗಿ ಕೇಳಿದರು. ಪ್ರತ್ಯೇಕವಾಗಿ ಕಾಸರಗೋಡು, ಬಿದರೆ, ಬೆಳಗಾಂ, ಈ ರೀತಿಯ ಚರ್ಚೆ ಬರಲಿಲ್ಲ. ನಾನು ಸ್ಪಷ್ಟವಾಗಿ ಮೊದಲೇ ಹೇಳಿದ್ದೇನೆ, ಚರ್ಚೆ ಸೀಮಿತವಾಗಿರುವುದು ಮಹಾಜನ್ ಕಮಿಷನ್ ಸಿಫಾರಸುಗಳನ್ನು ಒಪ್ಪಲೇ ಬೇಕು ಎನ್ನುವುದು. ಆದ್ದರಿಂದ ಪ್ರತ್ಯೇಕವಾಗಿ ಪ್ರತಿಯೊಂದು ಭಾಗದ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಾಗಲಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ,—ಮಾನ್ಯ ಮುಖ್ಯ ಮಂತ್ರಿಯವರ ಭಾಷಣವನ್ನು ಕೇಳಿದಮೇಲೆ ಅವರು ನಮಗೆ ಕಾಂಗ್ರೆಸ್ ಮಾಡಿದಂತೆ ಕಾಣುತ್ತದೆ. ಈ ಸಮಸ್ಯೆ ಉದ್ಭವಿಸಿದ್ದೇ, ಪ್ರಧಾನ ಮಂತ್ರಿಗಳು ಅನ್ ಅಫಿಷಿಯಲ್ ಆಗಿ ಕೆಲವು ಸಲಹೆಗಳನ್ನು ಗೃಹಖಾತೆಯ ಅಧಿಕಾರಿಗಳ ಮುಖಾಂತರ ಕಳುಹಿಸಿದ ಮೇಲೆ. ಅದರ ಮೇಲೆ ಇಲ್ಲಿ ಬೇಕಾದಷ್ಟು ಗಲಾಟೆಯಾಗಿದೆ, ರೈಲು ನಿಲ್ಲಿಸುವುದು ಎಲ್ಲ ಆಗಿದೆ. ಅವರೂ ಈ ವಿಷಯದಲ್ಲಿ ಏನೂ ಮಾತನಾಡಲಿಲ್ಲವೆಂದರೆ ಏಕೆ ಮಾತನಾಡಲಿಲ್ಲವೆಂದು ನನಗೆ ಅರ್ಥವಾಗುವುದಿಲ್ಲ. ಪ್ರಧಾನ ಮಂತ್ರಿಗಳು ಕೆಲವು ಸಲಹೆಗಳನ್ನು ಕಳುಹಿಸಿದ್ದರಿಂದ ಅನಾವಶ್ಯಕವಾಗಿ ಜನಗಳ ಮನಸ್ಸು ಅಲ್ಲಕಲ್ಲೋಲವಾಗಿದೆ, ರಾಜ್ಯದಲ್ಲಿ ಇಂಥ ಪರಿಸ್ಥಿತಿಯುಂಟಾಗಿದೆ ಎಂದು ಮುಖ್ಯ ಮಂತ್ರಿಗಳು ಅವರ ಗಮನಕ್ಕೆ ಏಕೆ ತರಲಿಲ್ಲ?

ಗಡಿ ಸಮಸ್ಯೆ ವಿಷಯದ ಬಗ್ಗೆ ಶಾಸನ ಸಭೆಯ ಅಭಿಪ್ರಾಯವೇನಿದೆ ಅವನ್ನು ಪೂರ್ಣವಾಗಿ ಸಾಧ್ಯವಾದಷ್ಟು ರೀತಿಯಲ್ಲಿ ಕನ್‌ವೇ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆಂದು ಹೇಳಿದ್ದಾರೆ

ಇದು ಬಹಳ ವೇಗ ಆಗಿ ಇದೆ. ಈ ರಾಷ್ಟ್ರದಲ್ಲಿ ಮೂಲಭೂತವಾದ ನಿರುದ್ಯೋಗ ಸಮಸ್ಯೆ ಮುಂತಾದುವು ಜನರನ್ನು ಕಾಡುತ್ತಿರುವಾಗ ಪ್ರಜಾಪ್ರಭುತ್ವ ರೀತಿಯಿಂದ ಆಡಳಿತ ನಡೆಯುತ್ತಿರುವಾಗ ಗಡಿ ಸಮಸ್ಯೆಗಳನ್ನು ಮುಂದುವರಿಸಿಕೊಂಡು ಹೋಗದೆ ಅದನ್ನು ಕೂಡಲೇ ಬಗೆಹರಿಸಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಒತ್ತಾಯ ಮಾಡಿದರೇ? ಇಲ್ಲದೆ ಇದ್ದರೆ ಸುಮ್ಮನೆ ಮಾತನಾಡಿ ವಾಪಸು ಬಂದರೇ ಎನ್ನುವುದನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್—ಈಗ ಮಾನ್ಯ ಸದಸ್ಯರು ಹೇಳಿದಂತೆ ಮಾತು ನಿರ್ವಿವಾದವಾದದು. ಅಧಿಕಾರಿಗಳು ಬಂದದ್ದು ಪ್ರಪೋಸಲ್ಸ್ ಈ ರೀತಿ ಕಳುಹಿಸಿದ್ದಾರೆ ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ಏನೂ ಬರಲಾರದೆ ಹೋಗಿದ್ದರೆ ವಾತಾವರಣ ಕಲುಷಿತವಾಗುತ್ತಿರಲಿಲ್ಲ. ಅದರ ಬಗ್ಗೆ ಯಾರೂ ವಿವಾದ ಮಾಡಬೇಕಾದ ಪರಿಸ್ಥಿತಿ ಇಲ್ಲ. ಆದರೆ ಈಹೊತ್ತು ಈ ವಾತವರಣ ಕಲುಷಿತವಾಗಿದೆ ಎನ್ನುವಂಥದ್ದು ಕೂಡ ಕೇಂದ್ರ ಸರ್ಕಾರಕ್ಕೆ ಸ್ವಲ್ಪಮಟ್ಟಿಗೆ ಮನವರಿಕೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಪರಿಣಾಮ ಏನಾಗಿದೆ, ರೀ ಆಕ್ಷನ್ ಏನಾಗುತ್ತಿದೆ ಎನ್ನುವುದನ್ನು ಅವರು ತಿಳಿದುಕೊಳ್ಳುತ್ತಿದ್ದಾರೆ. ನಾನು ಮುಖ್ಯ ಮಂತ್ರಿಯಾಗಿ ಏನು ಮಾತನಾಡಿದ್ದೇನೆ ಎನ್ನುವಂಥದ್ದನ್ನು ಹೇಳಿದ್ದೇನೆಯೇ ಹೊರತು ಈ ಹೊತ್ತು ಏನೂ ಆಗುವ ಹಾಗೆಯೇ ಇಲ್ಲ, ಸಮಾಧಾನದಿಂದ ಇರೋಣ, ಗಡಿ ಪ್ರಶ್ನೆ ಕೋಲ್ಡ್ ಸ್ಟೋರೇಜ್‌ನಲ್ಲಿ ಬಿದ್ದು ಹೋಗಿದೆ, ಮಹಾಜನ್ ಕಮಿಷನ್ ರೆಕಮೆಂಡೇಷನ್ ಆಕ್ಸೆಪ್ಟ್ ಆಗುತ್ತದೆ ಎನ್ನುವ ಮಾತನ್ನು ಎಂದೂ ನಾನು ಹೇಳಿಲ್ಲ. ನಾವು ಜಾಗ್ರತರಾಗಿ ಇರಬೇಕಾಗುತ್ತದೆ. ಮಹರಾಷ್ಟ್ರದವರ ಒತ್ತಾಯ ಈಗಲೂ ಇರಬಹುದು. ಶ್ರೀ ಬೊಮ್ಮಾಯಿ ಅವರು ಹೇಳಿದ ಹಾಗೆ ನನ್ನ ಇಂಪ್ರೆಷನ್ ಬೇರೆ, ಮಹಾರಾಷ್ಟ್ರ ಮುಖ್ಯ ಮಂತ್ರಿಯವರ ಇಂಪ್ರೆಷನ್ ಬೇರೆ ಇದೆ. ಅದಕ್ಕಾಗಿ ಈ ಪ್ರಶ್ನೆ ಬಗೆಹರಿಯುತ್ತದೆ ಸಮಾಧಾನವಾಗುತ್ತದೆ, ಕೋಲ್ಡ್ ಸ್ಟೋರೇಜ್‌ನಲ್ಲಿ ಬೀಳುತ್ತದೆ ಎಂದು ಹೇಳಿಲ್ಲ. ರಾಜ್ಯದ ಹಿತಕ್ಕೆ ಯಾವಾಗ ಧಕ್ಕೆ ಬರುತ್ತದೆ, ಆವಾಗ ನಮ್ಮ ಹಿತ ರಕ್ಷಣೆ ಮಾಡುವುದಕ್ಕೆ ತಯಾರಾಗಬೇಕು ಎಂದು ಹೇಳಿದ್ದೇನೆ, ನನ್ನ ನಿಲುವು ಏನಿದೆ ಅದನ್ನು ಹೇಳಿದ್ದೇನೆ. ಯಾವ ತರಹ ಇಂಟರಪ್ರಿಟ್ ಮಾಡುವುದಕ್ಕೂ ನನಗೆ ತಿಳಿಯದಾಗಿದೆ. ಒಂದು ಸ್ವರೂಪ, ಬಣ್ಣ ಕೊಡುವುದಕ್ಕೆ ನಾನು ಪ್ರಯತ್ನ ಮಾಡಿಲ್ಲ. ಈ ಪ್ರಶ್ನೆಯನ್ನು ಬಗೆ ಹರಿಸುವುದಕ್ಕೆ ವಿಶ್ವ ಪ್ರಯತ್ನ ಮಾಡಿದ್ದೇನೆ. ಜೋನಲ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಚರ್ಚೆಗೆ ಬಂದಿದೆ ಎಲ್ಲವೂ ಮುಗಿದಮೇಲೆ ಈ ಕಮಿಷನ್ ನೇಮಕ ಮಾಡಲಾಗಿದೆ. ಅವರ ಸಿಫಾರಸುಗಳನ್ನು ಒಪ್ಪಬೇಕು, ಬೇರೆ ಹಾದಿ ಹುಡುಕುವುದು ಸರಿಯಾದುದಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

7-00 P.M.

ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರಲ್ಲಿ ಒಂದು ವಿಚಾರ ಸ್ಪಷ್ಟವಾಯಿತು. ಅವರು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದಮೇಲೆ ಅವರ ಮನಸ್ಸಿಗೆ ಉಂಟಾದಂಥ ಒಂದು ಪರಿಣಾಮ ಅವರು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಪ್ರಧಾನಮಂತ್ರಿಗಳಿಂದ ನ್ಯಾಯ ದೊರಕಬಹುದು ಎಂದು ಅವರು ಸ್ಪಷ್ಟಪಡಿಸಿದರು. ಅವರು ನ್ಯಾಯ ದೊರಕಿಸುವ ಭಾವನೆ ತಮಗಿದೆಯೆಂದು ಅವರ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ ಹಾಗೆ ಆಯಿತು.

ಇನ್ನು ಎರಡನೆಯ ವಿಚಾರವಾಗಿ ಹೇಳುವುದಾದರೆ ಇದೇ ಸಂದರ್ಭದಲ್ಲಿ ಮೈಸೂರು ದೇಶಕ್ಕೆ ಸಂಬಂಧಪಟ್ಟಂತೆ 4ನೇ ಪಂಚವಾರ್ಷಿಕ ಯೋಜನೆಗೆ ಸಾಕಷ್ಟು ಸಹಾಯ ಕೇಂದ್ರದಿಂದ ದೊರಕದೇ ಹೋಗಿದ್ದರೆ 350 ಕೋಟಿ ರೂಪಾಯಿಯ ಯೋಜನೆ ಕಾರ್ಯಗತ ಮಾಡುವುದು ಕಷ್ಟವಾಗುತ್ತಿತ್ತು. ಅದಕ್ಕಾಗಿ ಅವರು ಸಹಾಯ ಮಾಡಿದ್ದಾರೆ. ಅದಕ್ಕಾಗಿ ನಾನು ಅಲ್ಲೇ ಅವರಿಗೆ ಧನ್ಯವಾದಗಳನ್ನು ತಿಳಿಸಿದ್ದೇನೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಇನ್ನು ಮೊನ್ನೆ ಬಡ್ಜೆಟ್ ಚರ್ಚೆ ಕಾಲದಲ್ಲಿ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೇಳಿದಂಥ ಮಾತಿಗೂ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಮಾತುಗಳಿಗೂ ನಮಗೆ ಸ್ಪಷ್ಟವಾಗಿ ಒಂದಕ್ಕೊಂದಕ್ಕೆ ವಿರೋಧ ಕಂಡುಬಂದಿತು. ಅವೊತ್ತು ಮಾನ್ಯ ಹಣಕಾಸಿನ ಸಚಿವರು ಬಡ್ಜೆಟ್ ಭಾಷಣದಲ್ಲಿ ಮಾತನಾಡುವಾಗ ಕೇಂದ್ರದ ಧೋರಣೆ ಸರಿಯಲ್ಲ ಎನ್ನುವ ರೀತಿಯಲ್ಲಿ ಆ ರೀತಿ ಅಭಿಪ್ರಾಯ ಬರುವ ಹಾಗೆ ಆವೊತ್ತಿನ ದಿವಸ ಈ ಸಭೆಯಲ್ಲಿ ತಿಳಿಸಿದರು. ಆವೊತ್ತಿನ ದಿವಸ ಈ ಸಭೆಯಲ್ಲಿ ನಾನೂ ಹಾಜರಿದ್ದೆ. ಅವರು ಹೇಳಿದ್ದು ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ನಮಗೆ ಹಣ ಸರಿಯಾಗಿ ದೊರಕುತ್ತಾ ಇಲ್ಲ, ಫೈನಾನ್ಸ್ ಕಮೀಷನ್ನು

(ಶ್ರೀ ಡಿ. ದೇವರಾಜ ಅರಸ್)

ನಿಂದ ಅನ್ಯಾಯವಾಗಿದೆ, ಪ್ಲಾನಿಂಗ್ ಕಮೀಷನ್‌ನವರು ನಮಗೆ ನ್ಯಾಯ ದೊರಕಿಸಿ ಕೊಡುತ್ತಾ ಇಲ್ಲ ಎಂದು ಹೇಳಿದರು. ಈ ರೀತಿಯಾದ ಭಾವನೆಗಳು ಉಂಟಾಗಬೇಕಾದರೆ ಅದಕ್ಕೆ ಬಹುಮಟ್ಟಿಗೆ ಕಾರಣ ನಮ್ಮ ಮಂತ್ರಿಗಳು, ಆಗಿಂದಾಗ್ಗೆ ಬೇರೆ ಬೇರೆ ರೀತಿಯಲ್ಲಿ ಹೇಳಿಕೆಗಳನ್ನು ಕೊಡುವುದು ಆಗಿದೆ. ಅವೊತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೇಳಿದಂಥ ಮಾತುಗಳಿಗೆ ಈವೊತ್ತು ಅದರ ವಿರೋಧವಾಗಿ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಅದನ್ನು ಕೇಳಿ ಬಹಳ ಸಂತೋಷ ವಾಯಿತು. ಮತ್ತು ಮಹಾಜನ್ ಕಮೀಷನ್ ವರದಿಯನ್ನು ಜಾರಿಗೆ ತರಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ ಎನ್ನುವಾಗ ಇದರಲ್ಲಿ ನಮ್ಮ ಕೇಸು ಏನು ಇದೆ, ಅದರ ಹಿನ್ನಲೆ ಏನು ಇದೆ ಎನ್ನುವುದನ್ನೂ ಅವರು ಪ್ರಧಾನ ಮಂತ್ರಿಗಳಿಗೆ ಮನವರಿಗೆ ಮಾಡಿಕೊಟ್ಟಿದ್ದೇನೆ ಎಂದು ಹೇಳಿದರು. ಯಾವಾಗ ಹೋಮ್ ಡಿಪಾರ್ಟ್‌ಮೆಂಟಿನಿಂದ ಇಬ್ಬರು ಅಧಿಕಾರಿಗಳು ಬಂದು ಟೆಂಟಟೀವ್ ಪ್ರಪೋಸಲ್ಸ್‌ನ್ನು ಕೊಟ್ಟರೋ, ತಕ್ಷಣವೇ ಡೆಲ್ಲಿಗೆ ಹೋಗಿ ಪ್ರಧಾನಿಯವರ ಹತ್ತಿರ ಹೋಗಿ ಚರ್ಚೆ ಮಾಡಿದ್ದರೆ, ಇಷ್ಟೊಂದು ಕಲುಷಿತ ವಾತಾವರಣ ಉಂಟಾಗುತ್ತಿರಲಿಲ್ಲ. ಇವರು ಹೋಗದೆ ಆಲಸ್ಯ ಭಾವನೆ ತೋರಿಸಿ ಇಲ್ಲೇ ಕೂತುಕೊಂಡು ಕಾಗದ ಬರೆದು, ಅವೆಲ್ಲಾ ಜನಗಳಿಗೆ ಗೊತ್ತಾದ್ದರಿಂದ ಇಷ್ಟು ಅನಾಹುತಗಳಿಗೆ ಕಾರಣವಾಯಿತು. ಇದರಿಂದಾಗಿ ಜನರು ರೊಚ್ಚಿಗೆದ್ದು ರೈಲಿಗೆ ಬೆಂಕಿ ಹಚ್ಚುವುದು ಮೊದಲಾದ ಅನಾಹುತಗಳನ್ನು ಮಾಡಿದರು. ಆದುದರಿಂದ ಇನ್ನುಮೇಲಾದರೂ ಕೂಡ ಜವಾಬ್ದಾರಿ ಹೊತ್ತಂಥ ಮುಖ್ಯಮಂತ್ರಿಗಳು ಇದನ್ನು ಅರಿತುಕೊಂಡು ಇಂತಹ ಕ್ಲಿಷ್ಟ ಸಮಸ್ಯೆಗಳು ಬಂದಾಗ ಯಾವುದೇ ಕಾರಣದಿಂದಾಗಲಿ ಇದು ಪತ್ರಿಕೆಗಳಲ್ಲಿ ಬಂದಿದೆ ನಮಗೆ ಗೊತ್ತಿಲ್ಲ ಅನ್ನುವುದಾಗಲಿ ಅಥವಾ ಇದು ನಿರೀಕ್ಷಿತವಾಗಿ ಬಂತು ಎಂದು ಹೇಳುವುದಾಗಲಿ ಸರಿಯಲ್ಲ. ಪತ್ರಿಕೆಗಳಲ್ಲಿ ಬರುವುದಕ್ಕೆ ಸದಸ್ಯರೇ ಕಾರಣರಲ್ಲ. ಮುಖ್ಯಮಂತ್ರಿಗಳು ಹೇಳಿದರೋ ಅಥವಾ ಯಾವ ಕಾರಣ ದಿಂದಲೋ ಪತ್ರಿಕೆಗಳಲ್ಲಿ ಬಂದಿದೆ. ಅದು ನನಗೆ ಗೊತ್ತಿಲ್ಲ. ಈ ರೀತಿ ಟೆಂಟಟೀವ್ ಪ್ರಪೋಸಲ್ಸ್ ಬಂದ ತಕ್ಷಣವೇ ಹೋಗಿ ಮಾತನಾಡಿದ್ದರೆ ಇಷ್ಟು ಅನಾಹುತವಾಗಲಿ, ಕಹಿ ವಾತಾವರಣವಾಗಲಿ ಉಂಟಾಗುತ್ತಿರಲಿಲ್ಲ. ಮತ್ತೆ ಕೆಲವರು ಪ್ರಧಾನಿ ಮಂತ್ರಿಗಳ ವಿಚಾರದಲ್ಲಾಗಲಿ ಕೇಂದ್ರ ಸರ್ಕಾರದ ವಿಚಾರದಲ್ಲಾಗಲಿ ಮನಸ್ವೇಚ್ಛೆಯಾಗಿ ಮಾತನಾಡುವುದಕ್ಕೆ ಅವಕಾಶವೇ ಉಂಟಾಗುತ್ತಿರಲಿಲ್ಲ. ಇನ್ನು ಮೇಲಾದರೂ ಕೂಡ ಮುಖ್ಯಮಂತ್ರಿಗಳು ಇಂತಹ ಕಲುಷಿತ ವಾತಾವರಣ ಉಂಟಾಗುವುದಕ್ಕೆ ಅವಕಾಶ ಕೊಡದೆ ಇರುವ ರೀತಿಯಲ್ಲಿ ಈ ತರಹ ಸಮಸ್ಯೆ ಬಂದಾಗ ಅದು ಯಾವ ಮಟ್ಟದಲ್ಲೇ ಇರಲಿ, ಜಾಗರೂಕತೆಯಿಂದ ಭಾಗವಹಿಸಬೇಕು. ಇದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ದೇವರಾಜ್ ಅರಸ್‌ರವರು ಎರಡು ವಿಚಾರಗಳನ್ನು ಕೇಳಿದ್ದಾರೆ. ಎಲ್ಲಿ ನಮಗೆ ಸಹಾಯ, ಸಹಕಾರ, ನ್ಯಾಯ ಸಿಕ್ಕುತ್ತದೋ ಅಲ್ಲಿ ನಾವು ಸ್ಪಷ್ಟವಾಗಿ ಹೇಳುತ್ತೇವೆ. ಎಲ್ಲಿ ನಮಗೆ ಸಹಾಯ, ಸಹಕಾರ ಸಿಗುವುದಿಲ್ಲವೋ ಎಲ್ಲಿ ಅನ್ಯಾಯವಾಗುತ್ತದೋ ಅದನ್ನೂ ಸ್ಪಷ್ಟವಾಗಿ ಹೇಳುತ್ತೇನೆ. ಅನ್ಯಾಯವಾಗಿದ್ದರೆ ಅನ್ಯಾಯ ಎಂದು ಹೇಳುತ್ತೇವೆ. ಈರೀತಿ ಹೇಳಬೇಕಾದ್ದು ನಮ್ಮ ಧರ್ಮ. ನನಗೆ ನೆನಪು ಇದ್ದಂತೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಪ್ಲಾನಿಂಗ್ ಕಮೀಷನ್‌ನವರಿಂದ ಸಹಾಯ ಸಿಕ್ಕಲಿಲ್ಲ ಎಂದು ಹೇಳಲಿಲ್ಲ. ಪ್ಲಾನಿಂಗ್ ಕಮೀಷನ್ನಿನವರು ನಮ್ಮ ಪ್ಲಾನ್ ಸೈಜನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಅದನ್ನು ಸಹಾನುಭೂತಿಯಿಂದ ವಿಚಾರ ಮಾಡುತ್ತೇವೆ ಎಂದು ಹೇಳಿರುವುದನ್ನು ಅವರು ಹೇಳಿದ್ದಾರೆ. ಫೈನಾನ್ಸ್ ಕಮೀಷನ್‌ನವರಿಂದ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ನಾನು ಅನೇಕ ಸಲ ಹೇಳಿದ್ದೇನೆ. ಈವೊತ್ತು ಅನ್ಯಾಯ ಮಾಡಿದ್ದಾರೆ, ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಇದರ ಅರ್ಥ ಎಲ್ಲಿ ನಮಗೆ ನ್ಯಾಯ ಸಿಕ್ಕುವುದಿಲ್ಲವೋ ಅದನ್ನು ಪ್ರತಿಭಟನೆ ಮಾಡುತ್ತೇವೆ ಎನ್ನುವ ಅರ್ಥ. ಈ ರೀತಿ ಮಾಡಿದರೆ ಅವರು ಏನಾದರೂ ತಿಳಿದುಕೊಳ್ಳುತ್ತಾರೆ ಎಂದು. ಕೇಂದ್ರ ಸರ್ಕಾರದವರು ಯಾವ ಪಕ್ಷದವರೇ ಆಗಿರಲಿ ನಮ್ಮ ಹಿತರಕ್ಷಣೆಗೆ ಧಕ್ಕೆ ಉಂಟುಮಾಡಿದರೆ, ನಮಗೆ ವಿರುದ್ಧವಾಗಿ ನಡೆದುಕೊಂಡರೆ ನಾವೇನೂ ಸಮಾಧಾನದಿಂದ ಇರುವುದಕ್ಕಾಗುವುದಿಲ್ಲ.

ಎರಡನೆಯದಾಗಿ ಈ ವಿಚಾರವಾಗಿ ಟೆಂಟಟೀವ್ ಪ್ರಪೋಸಲ್ಸ್ ಬಂದಾಗಲೇ ಹೋಗಿ ಮಾತನಾಡಿದ್ದರೆ ಈ ಕಹಿ ವಾತಾವರಣ ಉಂಟಾಗುತ್ತಿರಲಿಲ್ಲ, ಅಷ್ಟೇ ಅಲ್ಲ, ಅನಾಹುತವೂ ಆಗುತ್ತಿರಲಿಲ್ಲ ಎಂದು ಶ್ರೀಮಾನ್ ದೇವರಾಜ್ ಅರಸ್‌ರವರು ಈ ಸಭೆಗೆ ಹೇಳಿದ್ದಾರೆ. ಯಾವಾಗ ಟೆಂಟಟೀವ್ ಪ್ರಪೋಸಲ್ಸ್ ಬಂತೋ ಆವಾಗ ನಾನು ಪತ್ರ ಕಳುಹಿಸಿಕೊಟ್ಟೆ. ಅವರು ಉತ್ತರ ಬರೆಯುತ್ತಾರೆಂದು ಕಾಯುವುದು ಸ್ವಾಭಾವಿಕ. ಮಧ್ಯದಲ್ಲಿ ಕೆಲವು ಸದಸ್ಯರು ಡೆಲಿಗೇಷನ್ ಹೋಗಿದ್ದರು. ಅದು ಈ ಮಾನ್ಯ ಸಭೆಗೆ ಗೊತ್ತಿರಬೇಕು. ಅವರು ಹೋದಾಗ ಶ್ರೀಮಾನ್

ಚವ್ಹಾಣರ ಜೊತೆಯಲ್ಲೂ ಮಾತನಾಡಿದ್ದಾರೆ. ಆವಾಗ ಚವ್ಹಾಣರು ಹೇಳಿದರು ಹೋಮ್ ಡಿಪಾರ್ಟ್‌ಮೆಂಟಿನಿಂದ ಇಬ್ಬರು ಅಧಿಕಾರಿಗಳನ್ನು ನಿಮ್ಮ ಮುಖ್ಯಮಂತ್ರಿಗಳ ಹತ್ತಿರ ಕಳುಹಿಸಿ ಕೊಟ್ಟಿದ್ದೇನೆ. ಎಂದು ಅದರಂತೆ ಟೆಂಟೇಟಿವ್ ಪ್ರಪೋಸಲ್ಸ್ ಬಂದ ತಕ್ಷಣ ನಾನು ಪತ್ರ ಬರೆದೆ. ಅದಕ್ಕೆ ಉತ್ತರ ಬರೆಯುತ್ತಾರೆಂದು ಕಾಯುವುದು ಸ್ವಾಭಾವಿಕ. ಅದು ಬರುವುದಕ್ಕೆ ಮುನ್ನ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ನನಗೆ ಆರೋಗ್ಯವು ಚನ್ನಾಗಿರಲಿಲ್ಲ. ಎರಡು ದಿವಸ ಬಿಟ್ಟುಕೊಂಡು ಬರುತ್ತೇನೆ ಎಂದು ಹೇಳಿದ್ದೇನೆ. ಇಲ್ಲ ಎಂದರೆ ನಾಳೆ ಬೇಕಾದರೂ ಬರುತ್ತೇನೆ ಎಂದು ಹೇಳಿದೆ. ಈ ವಿಚಾರ ಪ್ರಧಾನ ಮಂತ್ರಿಗಳಿಗೂ ಹೇಳಿದ್ದೇನೆ. ಈಗ ಏನೇನು ಗಂಡಾಂತರ ಬಂದಿತ್ತೋ ಅವೆಲ್ಲಾ ಹೋಯಿತು ಎನ್ನುವ ಇಂಪ್ರೆಷನ್ ತಿಳಿದುಕೊಂಡರೆ ಅದು ತಪ್ಪು. ಸ್ವಲ್ಪ ಹೊತ್ತು ಮುಂಚೆ ಈಗಾಗಲೇ ಹೇಳಿದ್ದೇನೆ. ಮುಂದಿನ ಡೆವಲಪ್‌ಮೆಂಟನ್ನು ಕಾದು ನೋಡಬೇಕಾಗಿದೆಯೇ ಹೊರತು ಈವೊತ್ತು ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈವೊತ್ತು ಏನು ಇಂಪ್ರೆಷನ್ ಇದೆಯೋ ಅದು ನನಗೆ ಗೊತ್ತಿರುವ ಹಾಗೆ ಅಲ್ಲಿ ಮಹಾರಾಷ್ಟ್ರದ ಚೀಫ್ ಮಿನಿಸ್ಟರ್ ಇಂಪ್ರೆಷನ್ ನಾನು ತಿಳಿದುಕೊಂಡ ಹಾಗೆ ವಿರೋಧವಾಗಿದೆ. ನಾವು ಒಪ್ಪಲಿ, ಒಪ್ಪದೇ ಇರಲಿ ಕೇಂದ್ರ ಸರ್ಕಾರದವರೇ ಈ ವಿವಾದವನ್ನು ಬಜೆಟ್ ಸೆಷನ್ ಮುಗಿಯುವುದರೊಳಗೆ ಬಗೆಹರಿಸುತ್ತಾರೆಂದು ಅವರ ಇಂಪ್ರೆಷನ್ ಆಗಿದೆ. ಆದುದರಿಂದ ಈವೊತ್ತು ಈ ವಿಷಯ ಮರೆತಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಜವಾಬ್ದಾರಿ ಪ್ರತಿಯೊಬ್ಬರ ಮೇಲೂ ಇದೆ. ಈ ವಿಚಾರದಲ್ಲಿ ಬಹಳ ಕಾಲ ಮಾತನಾಡಿದರೆ ಹೇಳಿದ್ದನ್ನೇ ಹೇಳಬೇಕಾಗುತ್ತದೆ. ಆದುದರಿಂದ ಮುಂದಿನ ಡೆವಲಪ್‌ಮೆಂಟನ್ನು ಕಾದು ನೋಡಬೇಕಾಗಿದೆ ಈವೊತ್ತು ಪ್ರಧಾನಿಯವರಿಗೂ, ಮತ್ತು ಮೆಂಬರ್ಸ್‌ಗೂ ಇದರ ಹಿನ್ನೆಲೆ ಯಾವರೀತಿ ಇದೆ, ಇದರ ವಾತಾವರಣ ಹೇಗೆ ಉಂಟಾಯಿತು ಎನುವುದನ್ನು ತಿಳಿಸಲು ಇಲ್ಲಿಂದ ಡೆಲಿಗೇಷನ್ ಹೋಗಿ ಎಲ್ಲರಿಗೂ ತಿಳಿಸಿರುವುದರಿಂದ ಈ ತರಹದ ಪ್ರಪೋಸಲ್ಸ್‌ನಿಂದ ತಕ್ಷಣ ಪ್ರತಿಕ್ರಿಯೆ ಇಷ್ಟಾಗಿದೆ. ಈ ಪರಿಸ್ಥಿತಿಯನ್ನು ಮೈಸೂರಿನ ಜನತೆಯ ಮೇಲೆ ಹೊರಿಸಿದರೆ ಅವರ ರೀಆಕ್ಷನ್ ಏನಾಗುತ್ತದೆ ಎನ್ನುವ ಅರಿವು ಕೇಂದ್ರದಲ್ಲಿ ಆಗುತ್ತದೆ ಎನ್ನುವುದನ್ನು ಮರೆಯಬಾರದು. ನಾನು ಹೀಗೆ ಹೇಳಿದೆ ಎಂದು ಯಾರೂ ಭಾವಿಸಬಾರದು. ಈ ಹಿಂಸಾಕೃತ್ಯಗಳು ನಡೆದಿರುವುದು ಸರಿಯಾಗಿದೆ, ಆರೀತಿ ನಡೆಯಬೇಕು ಹಾಗಾದರೆ ಕೇಂದ್ರ ಸರ್ಕಾರ ಕಣ್ಣು ತೆರೆಯುತ್ತಾರೆ ಎಂದು ನಾನು ಆರೀತಿ ಭಾವಿಸುವುದಿಲ್ಲ. ನಾನು ಮುಖ್ಯಮಂತ್ರಿಯಾಗಿ ಮಾತನಾಡಬೇಕಾದರೆ ನನ್ನ ಕರ್ತವ್ಯ ಏನೆಂದರೆ ಶಾಂತಿ ಕಾಪಾಡುವುದು, ಶಾಂತಿ ಸ್ಥಾಪನೆ ಮಾಡುವುದು, ಲಾ ಅಂಡ್ ಆರ್ಡರ್ ಮೈನ್‌ಟೈನ್ ಮಾಡುವುದು ಇವೆಲ್ಲಾ ಮಾಡುವಂಥಾದ್ದು ನನ್ನ ಜವಾಬ್ದಾರಿ. ನಮ್ಮ ನಾಯಕರು ಮತ್ತು ಸದಸ್ಯರು ಆ ರೀತಿ ಡೆಲಿಗೇಷನ್ ಹೋಗಿದ್ದುದು ಒಳ್ಳೆಯ ಪರಿಣಾಮವಾಗಿದೆ, ಬಹಳಮಟ್ಟಿಗೆ ಪರಿಣಾಮವಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರದ ಮುಂದೆ ಈ ರೀತಿಯಾದಂಥ ಪ್ರಪೋಸಲ್ಸ್‌ನ್ನು ತೆಗೆದುಕೊಂಡು ಹೋಗುವುದು ಒಳ್ಳೆಯ ಪ್ರತಿಕ್ರಿಯೆ ಉಂಟುಮಾಡುತ್ತದೆ ಎಂದು ನನಗೆ ಅನಿಸುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ದೇಶಕ್ಕೆ ಯಾವರೀತಿ ಅನ್ಯಾಯವಾಗಲಿ. ಅದಕ್ಕಾಗಿ ಕೇಂದ್ರ ಸರ್ಕಾರದಲ್ಲಿ ಯಾರೇ ಇರಲಿ, ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಈ ಸಭೆಯ ಬಗ್ಗೆ ಜಾಗೃತಿ ಇರಬೇಕು. ಈ ರೀತಿ ಹೋರಾಟ ಮಾಡುವಾಗ ಈ ಮಾನ್ಯ ಸಭೆಯ ಸದಸ್ಯರು ಯಾರೂ ಈ ವಿಷಯದಲ್ಲಿ ಹಿಂತೆಗೆಯುವುದಿಲ್ಲ. ಅವರಷ್ಟೇ ಹೋರಾಟ ಮಾಡುವುದಕ್ಕೆ ಸಿದ್ಧವಾಗಿದ್ದಾರೆ ಎನ್ನುವ ವಿಚಾರ ತಮ್ಮ ಮೂಲಕ ನಾನು ಅವರಿಗೆ ತಿಳಿಸಬೇಕಾಗಿದೆ. ಯಾವುದೇ ಒಂದು ಸನ್ನಿವೇಶ ಬಂದಾಗ, ಯಾವ ಒಂದು ಕಾರ್ಯವೇ ಆಗಲಿ, ಅದರ ಬಗ್ಗೆ ಯಾವ ಕಾಲದಲ್ಲಿ ಏನೇನು ಮಾಡಬೇಕೋ ಅದನ್ನು ಮಾಡದೆ ಅಜಾಗರೂಕತೆಯಿಂದ ಉಂಟಾದಂತಹ ಪರಿಣಾಮಗಳಲ್ಲಿ ಕೇಂದ್ರದವರು ವಿರೋಧ ಪಾರ್ಟಿಯಲ್ಲಿದ್ದಾರೆ ಎಂದು ಕೇಂದ್ರದವರನ್ನು ಆಕ್ಷೇಪಣೆ ಮಾಡುವ ರೀತಿಯಲ್ಲಿ ಒಂದು ವಾತಾವರಣವನ್ನು ಇಲ್ಲಿ ಕಲ್ಪನೆ ಮಾಡುವಂಥಾದ್ದು ಸರಿಯಲ್ಲ.

MR. SPEAKER.—The House will now rise and meet tommorow at 12 Noon.

The House adjourned at Ten Minutes past Seven of the Clock to meet again at Twelve of the Clock on Tuesday, the 24th March, 1970.

14771 WD—GPB—550—11-8-1970